ಹೊಸ ಮನುಷ್ಯ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಜನವರಿ-೨೦೦೭ ಸಂಚಿಕೆ-೬



ಮಮತಾ ಜನತಾ ಬಂಡಾಯದ ಸಂಕೇತ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಜನವರಿ-೨೦೦೭
ಸಂಪುಟ-೭
ಸಂಚಿಕೆ-೬

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೪೮
e-mail - janapada@yahoo.com

ಇಂದು ಇಂತಾಯ್ತೆಂದು ನಾಳೆ ಎಂತೋ ಏನೊ
ಇಂದು ಅಳ್ಳೆದೆಯಲ್ಲಿ ಕೊರಗಲೇಕೆ?
ಹುಟ್ಟಿದುದು ತಪ್ಪೆಂದು ಬಾಳೆಲ್ಲ ಗೋಳೆಂದು
ಎಡರಿನಲಿ ಮನ ಕುಗ್ಗಿ ಅಳುಕಲೇಕೆ?

ಇಂದೆನ್ನ ಒಂದಾಸೆ ವ್ಯರ್ಥವಾಯಿತು ಎಂದು
ಮುಂಬರುವ ಸಂತಸವ ನೂಂಕಲೇಕೆ?
ಎಂದಾದರೊಂದು ದಿನ ಬರಬಹುದು
ಸೊಗದ ದಿನ
ಎಂಬ ಆಶೆಯ ತೊರೆದು ಮರುಗಲೇಕೆ?

ನಾನು ಬಯಸಿದುದೆಲ್ಲ ನಡೆಯಲೇ ಬೇಕೆಂಬ
ನಿಯಮವನು ಮುಂದಿಟ್ಟು ಅರಸಲೇಕೆ?
ನೀನೆಂದು ಎಣಿಸದಿಹ ಫಲ ತಾನೆ ಕೈಸೇರೆ
ತನ್ನ ಸಾಹಸವೆಂದು ಹೊಗಳಲೇಕೆ?
ಫಲವ ಬಯಸದ ಕರ್ಮ
ನಿಜಸೇವೆ ಎಂಬುದನು
ಮರೆದು ಗಾವಿಲನಂತೆ ಮರುಗಲೇಕೆ?

– ಜಿ. ಎಸ್. ಶಿವರುದ್ರಪ್ಪ

ವಿಚಾರ ದೀಪ್ತಿ

ಒಂದು ಊರಿನಲ್ಲಿ ಒಬ್ಬ ವ್ಯಾಪಾರಿ. ಅವನನ್ನು 'ಅಂಗಡಿಯ ಅಣ್ಣ' ಎನ್ನುತ್ತಿದ್ದರು. ಒಂದು ದಿನ ಅವನು ಅಜಾಮಿಳನ ಕಥೆ ಕೇಳಿದ.

ಆಗ 'ಅಜಾಮಿಳನಿಗೆ ಇದ್ದವನು ಒಬ್ಬನೇ ಮಗ. ಅವನಿಗೆ ನಾರಾಯಣ ಅಂತ ಅವನು ಹೆಸರಿಟ್ಟ.. ಸಾಯುವ ಹೊತ್ತಿನಲ್ಲಿ ಮಗನನ್ನು ಕರೆದ. ನಾರಾಯಣ ಎಂಬುದು ದೇವರ ಹೆಸರೆಂದು ಅವನಿಗೆ ಗೊತ್ತಿರದಿದ್ದರೂ, ಆ ನಾಲ್ಕು ಅಕ್ಷರಗಳನ್ನು ಉಚ್ಚರಿಸಿದ. ಅಷ್ಟರಿಂದಲೇ ಅವನಿಗೆ ವಿಷ್ಣುಲೋಕ ಪ್ರಾಪ್ತವಾಯಿತು. ನನಗಾದರೋ ಹನ್ನೆರಡು ಗಂಡು ಮಕ್ಕಳಿದ್ದಾರೆ. ಅವರೆಲ್ಲರಿಗೂ ದೇವರ ಒಂದೊಂದು ಹೆಸರು ಇಟ್ಟುಬಿಟ್ಟರೆ, ನಾನು ಅಜಾಮಿಳನ ಅಣ್ಣನೇ ಆಗಿ ಬಿಡುತ್ತೇನೆ. ಮೂರು ಹೊತ್ತೂ ದೇವರ ನಾಮ ಸ್ಮರಣೆ ಮಾಡಿದಹಾಗೆ ಆಗುತ್ತದೆ. ಬದುಕಿದ್ದಾಗ ನಾನು ಏನು ಬವಣೆಪಟ್ಟರೂ, ಸಾಯುವ ಕಾಲದಲ್ಲಿ ನನ್ನ ಸಹಾಯಕ್ಕೆ ನನ್ನ ಮಕ್ಕಳು ಇರುತ್ತಾರೆ' ಎನ್ನಿಸಿತು.

ಹೀಗೆಂದುಕೊಂಡು ಅಂಗಡಿಯ ಅಣ್ಣ ತನ್ನ ಮಕ್ಕಳನ್ನು ಕರೆದ! 'ಅಪ್ಪಾ ಮಕ್ಕಳಿರಾ! ಇನ್ನು ಮೇಲೆ ನಿಮ್ಮನ್ನು ನಾನು ಮಗು, ಮರಿ, ಸಣ್ಣ, ಪುಟ್ಟ, ಪಾಪ ಮೊದಲಾದ ಹೆಸರುಗಳಿಂದ ಕರೆಯುವುದಿಲ್ಲ' ಎಂದು ಹೇಳಿ, ಅವರಿಗೆ ಶ್ರೀಧರ, ಕೇಶವ, ಮಾಧವ, ದಾಮೋದರ, ಹೃಷೀಕೇಶ, ಇತ್ಯಾದಿ ಹನ್ನೆರಡು ಹೆಸರುಗಳನ್ನು ಇಟ್ಟ.. 'ಈಗ ನಾನು ಅಜಾಮಿಳನ ಅಣ್ಣನಾದೆ' ಎಂದು ಹಿಗ್ಗಿದ,

ಅಂದಿನಿಂದ ಅವನ ಮನೆಯಲ್ಲಿ – 'ಮಾಧವಾ! ಅಂಗಡಿ ಬಾಗಿಲು ತೆರೆಯೋ!' – 'ಗೋವಿಂದಾ! ತೂಕದ ಬೊಟ್ಟು ಒರೆಸೋ!'– 'ದಾಮೋದರಾ! ಆ ಗಿರಾಕಿಯ ಬಾಕಿ ಬಂತೇನೋ?'– ಹೃಷೀಕೇಶ! ಎಲ್ಲಿ ಹಾಳಾಗಿಹೋದೆಯೋ!'– 'ಲೋ! ಮನೆಹಾಳ ಮುಕುಂದಾ!'– 'ಆ ಶ್ರೀಧರನನ್ನು ಹಿಡಿದು ಒದಿಯೋ' ಮೊದಲಾದ ಕೂಗು ಬೆಳಗಿನಿಂದ ರಾತ್ರಿಯವರೆಗೂ ಕೇಳಿ ಬರುತ್ತಿತ್ತು.

ಅಣ್ಣನ ಮಕ್ಕಳು ಬೆಳೆದರು. ಅವನ ವ್ಯಾಪಾರ ಕುದುರಿತು. ಲಕ್ಷ್ಮಿ ಅವನ ಮನೆಯಲ್ಲಿ ನರ್ತನವಾಡಿದಳು. 'ನಾರಾಯಣನೇ ನನ್ನ ಮನೆಯಲ್ಲಿ ನನ್ನ ಹನ್ನೆರಡು ಮಕ್ಕಳ ರೂಪದಲ್ಲಿ ನಲಿಯುತ್ತಿದ್ದಾನೆ!' ಎಂದು ಅಣ್ಣ ಹಿಗ್ಗಿದ.

ಕೊನೆಗೆ ಒಂದು ದಿನ ಅಣ್ಣನಿಗೆ ಅವಸಾನಕಾಲ ಬಂತು. ಹನ್ನೆರಡು ಮಕ್ಕಳನ್ನೂ ಹೆಸರು ಹಿಡಿದು ಕೂಗಿದ. ಅವರೆಲ್ಲರೂ ಬಂದರು. ಅಣ್ಣ ನೋಡಿದ. ಥೂ ದರಿದ್ರಗಳಾ! ಎಲ್ಲರೂ ಇಲ್ಲಿ ಬಂದರೆ, ಅಂಗಡಿ ನೋಡಿಕೊಳ್ಳುವವರು ಯಾರೋ? ಎಂದು ರೇಗಿದ.

ಮಕ್ಕಳೆಲ್ಲಾ ಅಂಗಡಿಗೆ ಹೋದರು. ಅಣ್ಣನನ್ನು ಯಮದೂತರು ಎತ್ತಿಕೊಂಡು ಹೋದರು.

– ಜಿ. ಪಿ. ರಾಜರತ್ನಂ

ಮಮತಾ, ಜನತಾ ಬಂಡಾಯದ ಸಂಕೇತ

-ಸುರೇಂದ್ರ ಕೌಲಗಿ

"ಸ್ವಾತಂತ್ರ್ಯ ಮತ್ತು ಪ್ರಜಾತಂತ್ರದ ಕೈಗಳು ಅಮಾಯಕರ ರಕ್ತದಿಂದ ಕೆಂಪಾದಾಗ ಅವು ಅಪವಿತ್ರಗೊಳ್ಳುತ್ತವೆ." – ಗಾಂಧೀ

ಈ ಲೇಖನ ಅಚ್ಚಿಗೆ ಹೋಗುವ ವೇಳೆಯಲ್ಲಿ ಮಮತಾ ಬ್ಯಾನರ್ಜಿಯವರ ಉಪವಾಸ ಇಪ್ಪತ್ತೈದು ದಿನಗಳನ್ನು ದಾಟಿ ಮುಂದುವರೆಯುತ್ತಿದೆ; ಅವರ ಆರೋಗ್ಯ ಕುಸಿಯುತ್ತಿದೆ. ಆದರೆ ಸರ್ಕಾರದ ನೀತಿಯಲ್ಲಿಯ ಕಾಠಿಣ್ಯ ಎಳ್ಳಷ್ಟೂ ಬದಲಾವಣೆಯಾಗಿಲ್ಲ. ಈ ದೇಶದಲ್ಲಿ ಪ್ರಜಾಪ್ರಭುತ್ವ ಇದೆಯೇ ಇಲ್ಲವೇ ಎಂಬುದು ಸಿದ್ಧವಾಗಲಿದೆ.

ಇಂದು ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ವಾಣಿಜ್ಯಕರಣ ರಾಜಕೀಕರಣ ಮುಂತಾದ ಸಾಮಾಜಿಕ ಬೆಳವಣಿಗೆಗಳಿಂದಾಗಿ ನಮ್ಮ ದೇಶದ ಆರ್ಥಿಕ ನೀತಿ ತಲೆ ಕೆಳಗಾಗಿದೆ, ಕೈಗಾರಿಕಾ ನೀತಿ ದಾರಿ ತಪ್ಪಿದೆ, ರಾಜಕಾರಣ ತರಗೆಲೆಯಾಗಿದೆ. ಆದ್ದರಿಂದ ಅಭಿವೃದ್ಧಿಯ ತಾಂಡವ ನೃತ್ಯ ನಾಗರಿಕನ ಸುತ್ತಲೂ ನಡೆಯುತ್ತಿದ್ದರೂ ಅವನು ದಿಕ್ಕೆಟ್ಟವನಾಗಿದ್ದಾನೆ. ಅವನು ನಿಂತಿರುವ ನೆಲ ಕುಸಿಯುತ್ತಿದೆ, ಅವನ ಜೀವನ ದಿನಕಳೆದಂತೆ ದುರ್ಭರವಾಗುತ್ತಿದೆ. ಶ್ರೀಮಂತ ಮತ್ತು ಬಡವ ಎಂದು ಸಮಾಜ ಇಬ್ಭಾಗವಾಗುತ್ತಿದೆ. ತಾಂತ್ರಿಕತೆ ನಾಗರಿಕನ ಜೀವನವನ್ನು ಬಹುಮಟ್ಟಿಗೆ ಅಪಾಯದ ಅಂಚಿಗೆ ತಂದು ನಿಲ್ಲಿಸಿದೆ. ಚಂದ್ರಯಾನಗಳಾಗಲಿ, ಡಿಸ್ಕವರಿ ಯಾತ್ರೆಗಳಾಗಲಿ, ನ್ಯೂಕ್ಲಿಯರ್ ಸ್ಥಾವರಗಳಾಗಲಿ, ಜಿಲ್ಲಾ ಸ್ಥಳಗಳಿಗೂ ಬರುತ್ತಿರುವ ವಿಮಾನ ಸಂಚಾರಗಳಾಗಲಿ, ರೈತರಿಗೆ ಕೊಡಲಾಗುತ್ತಿರುವ ಶೇಕಡಾ ನಾಲ್ಕರಷ್ಟು ಬಡ್ಡಿ ದರದ ಸಾಲವಾಗಲಿ ನಾಗರಿಕನಲ್ಲಿ ಸಮಾಧಾನ ತಂದಿಲ್ಲ. ರೈತರ ಆತ್ಮಹತ್ಯೆ ನಿರಂತರವಾಗಿ ನಡೆದಿದೆ. ಆಡಳಿತ ಅವನನ್ನು ಶೋಷಿಸುತ್ತಿದೆ. ದೇಶ ವ್ಯಾಪಿ ಹಬ್ಬಿರುವ ಸ್ತ್ರೀ ಶಕ್ತಿ ಸಂಘಟನೆಗಳು ಸ್ವಾಭಿಮಾನದ ಶಕ್ತಿ ಪ್ರದರ್ಶನದ ಮಾರ್ಗಗಳಾಗದೆ ಸಾಲದ ಕೂಪಗಳಾಗಿವೆ, ಅಧಿಕಾರಿಗಳಿಗೆ ಮತ್ತು ರಾಜಕಾರಣಿಗಳಿಗೆ ಬಹುಪರಾಕ್ ಹೇಳುವ ಗುಂಪುಗಳಾಗಿವೆ, ಶಿಶುವಿಹಾರದ ಶಿಕ್ಷಣದಿಂದ, ಪಿ.ಎಚ್.ಡಿ ವರೆಗಿನ ಶಿಕ್ಷಣ ಮಾರಾಟಕ್ಕಿದೆ, ಪರಿಣಾಮವಾಗಿ ಶಿಕ್ಷಿತರೆಲ್ಲರೂ ಅಶಿಕ್ಷಿತರಾಗುತ್ತಿದ್ದಾರೆ, ನಿರುದ್ಯೋಗಿಗಳಾಗುತ್ತಿದ್ದಾರೆ. ವಿಶ್ವ ವಿದ್ಯಾನಿಲಯಗಳು ಜಾತೀಯತೆ, ಭ್ರಷ್ಟಾಚಾರ, ಸ್ವಜನಪಕ್ಷಪಾತದಂತ ಅನೈತಿಕ ಚಟುವಟಿಕೆಗಳ ಕೇಂದ್ರಗಳಾಗಿವೆ. ಕೈಗಾರಿಕೆಗಳು ಭೂ ಕಬಳಿಕೆಯ ದಾನವರಾಗಿವೆ. ಎಲ್ಲಿ ಕೈಗಾರಿಕೆಗಳ ಸ್ಥಾಪನೆಯಾಗುತ್ತದೋ ಅವು ಅಲ್ಲಿಯ ಜನಜೀವನವನ್ನು ಕಟ್ಟುವ ಬದಲಾಗಿ ಅಸ್ತವ್ಯಸ್ತಗೊಳಿಸುತ್ತವೆ, ಪರಿಸರವನ್ನು ಹಾಳು ಮಾಡುತ್ತವೆ, ಸಾಂಸ್ಕೃತಿಕ ಪರಂಪರೆಯನ್ನು ಹಾಳುಮಾಡುತ್ತವೆ. ರೈತರನ್ನು ಒಕ್ಕಲೆಬ್ಬಿಸುತ್ತವೆ.

ಈಗಾಗಲೇ ನಗರ ಪ್ರದೇಶದಲ್ಲಿ ವಾಸವಾಗಿರುವ ಜನರಿಗೆ ಗ್ರಾಮೀಣ ಜನರ

ಬದುಕು ಹೇಗೆ ದುಃಸ್ಥಿತಿಗೆ ಒಳಗಾಗುತ್ತಿದೆ ಎಂಬುದರ ಕಲ್ಪನೆ ಇಲ್ಲ. ಜಗತ್ತಿನ ಬಹು ಸಂಖ್ಯಾ ದೇಶಗಳಲ್ಲಿಯ ಬಹು ಸಂಖ್ಯಾತ ಜನರು ಇನ್ನೂ ಭೂ ಆಧಾರಿತ ಜೀವನವನ್ನೇ ಸಾಗಿಸುತ್ತಿದ್ದಾರೆ. ಭೂಮಿ ಮತ್ತು ಕಾಡು ಅವರ ಜೀವನದ ಅವಿಭ್ಯಾಜ್ಯ ಅಂಗಗಳಾಗಿವೆ. ಆದರೆ ಈಗ ಜಗತ್ತಿನಾದ್ಯಂತ ಸ್ಥಾಪಿತಗೊಳ್ಳುತ್ತಿರುವ ಸಾವಿರಾರು ಸಂಖ್ಯೆಯ ವಿಶೇಷ ಆರ್ಥಿಕ ವಲಯಗಳು ಗ್ರಾಮೀಣ ಜನರನ್ನೂ, ಅರಣ್ಯಗಳಲ್ಲಿ ವಾಸವಾಗಿರುವ ಬುಡಕಟ್ಟು ಜನರನ್ನೂ ತಾಯ ಅಪ್ಪುಗೆಯಿಂದ ಮಕ್ಕಳನ್ನು ಬೇರ್ಪಡಿಸುವಂತೆ ಅವರವರ ಭೂ ಹಿಡುವಳಿಗಳಿಂದ ಬೇರ್ಪಡಿಸುತ್ತಿವೆ. ಶಾಶ್ವತವಾಗಿ ಅವರನ್ನು ಸ್ವಂತ ಭೂಮಿಯಿಂದ, ಸ್ವಂತ ನೆಲೆಯಿಂದ ವಂಚಿತರನ್ನಾಗಿ ಮಾಡುತ್ತಿವೆ.

ಇಂಥದೇ ಯೋಜನೆಯ ವಿರುದ್ಧವಾಗಿ ಮಮತಾ ಅನಿರ್ದಿಷ್ಟಕಾಲ ಉಪವಾಸವನ್ನು ಕೈಗೊಂಡಿದ್ದಾರೆ. ಅವರ ಉಪವಾಸದ ಉದ್ದೇಶ್ಯವಾದರೂ ಏನು? ಪಶ್ಚಿಮ ಬಂಗಾಲದ ಹೂಗ್ಲಿ ಜಿಲ್ಲೆಯಲ್ಲಿ ಒಳ್ಳೆ ಫಲವತ್ತಾದ ೯೯೭ ಎಕರೆ ಭೂಮಿಯನ್ನು ಅಲ್ಲಿಯ ಬುದ್ಧದೇವ ಭಟ್ಟಾಚಾರ್‌ಜಿಯವರ ಕಮ್ಯೂನಿಸ್ಟ್ ಪಕ್ಷ ಸರ್ಕಾರ ಟಾಟಾ ಕಂಪನಿಗೆ ಸಣ್ಣ ಕಾರುಗಳ ತಯಾರಿಕೆಗೆ ಕೊಟ್ಟಿದೆ. ಈ ಭೂಮಿಯನ್ನು ರೈತರಿಂದ ಬಲವಂತವಾಗಿ, ಕೋವಿಯ ಬೆದರಿಕೆಯಿಂದ, ಆಕರ್ಷಕ ಪರಿಹಾರದ ಆಶೆ ತೋರಿಸುವುದರಿಂದ, ಉಚ್ಚಾಟಿತ ರೈತರಿಗೆ ತಮ್ಮ ಕಂಪನಿಯಲ್ಲಿ ಉದ್ಯೋಗ ಕೊಡಲಾಗುವುದೆಂಬ ಭರವಸೆಯಿಂದ ಕಿತ್ತುಕೊಟ್ಟಿದೆ. ಈ ಎಲ್ಲ ಆಮಿಷಗಳು ಭೂ ಮಾಲೀಕರಿಗೆ ತೋರಿಸಲ್ಪಟ್ಟಿವೆ. ಆದರೆ ಈ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದ ಕೃಷಿ ಕಾರ್ಮಿಕರನ್ನು ಪೂರ್ಣವಾಗಿ ಮರೆಯಲಾಗಿದೆ. ಯಾವ ಕಮ್ಯೂನಿಸ್ಟ್ ಪಕ್ಷ ಒಂದು ಕಾಲಕ್ಕೆ ಉಚ್ಚಾಟಿತ ರೈತರ ಹಿತಕ್ಕಾಗಿ ಹೋರಾಡುತ್ತಿತ್ತೋ ಅದೇ ಪಕ್ಷದ ಸರ್ಕಾರ ಇಂದು ಕೈಗಾರಿಕಾಕರಣದ ಹೆಸರಿನಲ್ಲಿ, ಪಶ್ಚಿಮ ಬಂಗಾಳ ರಾಜ್ಯವನ್ನು ಅತಿ ಹೆಚ್ಚು ಅಭಿವೃದ್ಧಿ ಹೊಂದಿದ ರಾಜ್ಯವೆಂದು ಸಾಧಿಸಿ ತೋರಿಸಬೇಕೆಂಬ ಹುಮ್ಮಸ್ಸಿನಲ್ಲಿ ರೈತರ ಸ್ವತಂತ್ರ ಬದುಕಿನ ಮೇಲೆ ಗೋರಿ ಕಟ್ಟುತ್ತಿದೆ. ಶೀಮಂತರಾಗಿರುವ ಟಾಟಾ ಇನ್ನೂ ಹೆಚ್ಚು ಶ್ರೀಮಂತರಾಗಲಿದ್ದಾರೆ, ಬಡತನದ ರೇಖೆಯ ಕೆಳಗಿದ್ದ ರೈತರು ಪಾತಾಳಕ್ಕೆ ಹೋಗುತ್ತಿದ್ದಾರೆ. ಮಮತಾ ತಮ್ಮ ಆಮರಣಾಂತ ಉಪವಾಸದ ಮೂಲಕ ಅನೇಕ ಪ್ರಶ್ನೆಗಳನ್ನು ದೇಶದ ಜನತೆಯ ಮುಂದೆ ಇಟ್ಟಿದ್ದಾರೆ. ಅವುಗಳಲ್ಲಿ ಅತ್ಯಂತ ಪ್ರಮುಖವಾದುದು ದೇಶದ ೧೧೫ ಕೋಟಿ ಜನಸಂಖ್ಯೆಯ ಹೊಟ್ಟೆಗೆ ಕಾರುಗಳು, ಕಂಪ್ಯೂಟರ್‌ಗಳು, ಮೊಬೈಲುಗಳು, ಕಟ್ಟಡಗಳು ಬೇಕೆ ಅಥವಾ ಅನ್ನ ಮತ್ತು ಅನ್ನ ಸಂಪಾದಿಸುವ ಸ್ವಾತಂತ್ರ್ಯ ಬೇಕೆ ಎಂಬುದು, ಇನ್ನೊಂದು ಪ್ರಮುಖವಾದ ಪ್ರಶ್ನೆ ಮಮತಾ ಇಟ್ಟಿರುವುದು ಜಾಗತೀಕರಣದ ಹೆಸರಿನಲ್ಲಿ ಜಗತ್ತಿನಲ್ಲಿ ಎಲ್ಲ ದೇಶಗಳ ಅದು ಅಮೇರಿಕಾ ಆಗಿರಲಿ, ಇಥಿಯೋಪಿಯಾ ಆಗಿರಲಿ, ಇಂಗ್ಲೆಂಡ್ ಆಗಿರಲಿ, ಭಾರತವಾಗಿರಲಿ, ಬ್ರಿಜಿಲ್ ಆಗಿರಲಿ ಜಪಾನ್ ಆಗಿರಲಿ ಎಲ್ಲ ದೇಶಗಳ ಶ್ವಾಸಕೋಶವಾಗಿರುವ ಗ್ರಾಮಗಳನ್ನು ಹಾಳುಗೆಡವಿ ಗಗನಚುಂಬಿ ಕಟ್ಟಡಗಳ ನಗರವನ್ನು ಕಟ್ಟಬೇಕೆ ಎಂಬುದು. ಗಗನಚುಂಬಿ ಕಟ್ಟಡಗಳ ಹಿನ್ನೆಲೆಯಲ್ಲಿ ಬೆರಣಿ ಆಯುತ್ತಿರುವ ಮಹಿಳೆಯ ಚಿತ್ರ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಬದುಕಿನ ಇಂಥ ಜೀವನ ರೀತಿ ನಮಗೆ ಮಾನ್ಯವಾಗಬೇಕೆ ಎಂಬುದು ಮಮತಾರವರ

ಪ್ರಶ್ನೆ. ಪ್ರಪಂಚದ ಜನಸಂಖ್ಯೆಯ ಮೂರನೆಯ ಎರಡು ಭಾಗದಷ್ಟು ಜನರು ಅಂದರೆ ಸುಮಾರು ಏಳುನೂರು ದಶಲಕ್ಷ ಜನರು ಕಡು ಬಡತನದಲ್ಲಿ ನರಳುತ್ತಿರುವಾಗ ಕೈಗಾರೀಕರಣದ ಹೆಸರಿನಲ್ಲಿ ಫಲವತ್ತಾದ ಭೂಮಿಯನ್ನು ಭೋಗಜೀವನ ಶೈಲಿಗೆ ಬೇಕಾದ ಸಣ್ಣ ಕಾರುಗಳನ್ನು ಉತ್ಪಾದಿಸಲು ಟಾಟಾರಂಥ ಶ್ರೀಮಂತ ಕೈಗಾರಿಕೋದ್ಯಮಿಗಳಿಗೆ ಮಣ್ಣಿನ ಮಕ್ಕಳಿಂದ, ಅರಣ್ಯದ ಮಕ್ಕಳಿಂದ ಕಿತ್ತುಕೊಡುವುದು ನ್ಯಾಯವೆ ಎಂಬುದು ಮಮತಾರವರ ನಗ್ನ ಪ್ರಶ್ನೆ. ಚೀನಾವನ್ನು ಅನುಕರಿಸುತ್ತಾ ಇಂದು ನಮ್ಮ ದೇಶದಲ್ಲಿ ಎಲ್ಲೆಂದರಲ್ಲಿ ಪುನಃ ಅದೇ ದೇಶದ ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ, ಕೈಗಾರೀಕರಣದ ಹೆಸರಿನಲ್ಲಿ ತಲೆಯೆತ್ತುತ್ತಿರುವ ವಿಶೇಷ ಆರ್ಥಿಕ ವಲಯಗಳು ರೈತರಿಂದ ಭೂಮಿ ಕಿತ್ತುಕೊಳ್ಳುತ್ತಿವೆ. ಈ ಯೋಜನೆಯ ಹಿಂದೆ ಭೂಗಳ್ಳರ, ರಾಜಕಾರಣಿಗಳ, ಗುತ್ತಿಗೆದಾರರ ಅನೈತಿಕ ಒಪ್ಪಂದವಿದೆ. ಈಗಿನ ಒಂದು ಅಂದಾಜಿನ ಪ್ರಕಾರ ದೇಶದ ವಿವಿಧೆಡೆಯಲ್ಲಿ ಒಂದು ಲಕ್ಷದ ಇಪ್ಪತ್ತೈದು ಸಾವಿರ ಹೆಕ್ಟೇರ್ ಭೂಮಿಯನ್ನು ವಶಪಡಿಸಿಕೊಳ್ಳಲಾಗುವುದು. ಈ ವಿಶೇಷ ಆರ್ಥಿಕ ವಲಯಗಳಲ್ಲದೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳ ಸ್ಥಾಪನೆಗಾಗಿ, ಈಗಿರುವ ಎಲ್ಲಾ ವಿಮಾನ ನಿಲ್ದಾಣಗಳ ಸಾರಿಗೆ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ, ಉಪನಗರಗಳ ನಿರ್ಮಾಣಕ್ಕಾಗಿ, ಹೆದ್ದಾರಿಗಳ ನಿರ್ಮಾಣಕ್ಕಾಗಿ ಇನ್ನೂ ಯಾವಯಾವುದೋ ಉದ್ದೇಶಗಳಿಗಾಗಿ ಭೂಮಿಯನ್ನು ವಶಪಡಿಸಿಕೊಳ್ಳುವ ಕೆಲಸ ಅವ್ಯಾಹತವಾಗಿ, ಅಹರ್ನಿಶಿ ನಡೆದಿದೆ. ಅಭಿವೃದ್ಧಿಯ ಈ ಪ್ರಕ್ರಿಯೆ ನಿಜವಾದ ಅರ್ಥದಲ್ಲಿ ಕೋಟ್ಯಾಂತರ ಜನರ ಜೀವನದಲ್ಲಿ ನೆಮ್ಮದಿ ತರಬಲ್ಲದೆ ಎಂಬುದು ಮಮತಾರವರ ಮೂಲಭೂತ ಪ್ರಶ್ನೆ.

ಹನ್ನೊಂದನೆ ಪಂಚವಾರ್ಷಿಕ ಯೋಜನೆಯ ಹೊಸ್ತಿಲಲ್ಲಿರುವ ದೇಶದ ಅಭಿವೃದ್ಧಿ ಯೋಜನೆಗಳು ದೇಶದ ಆರ್ಥಿಕ ನೀತಿಯನ್ನೂ, ಅಭಿವೃದ್ಧಿ ನೀತಿಯನ್ನೂ ದಾರಿತಪ್ಪಿಸಿಲ್ಲವೆ ಎಂದು ಮಮತಾರವರ ಆಮರಣಾಂತ ಉಪವಾಸ ಸವಾಲು ಹಾಕುತ್ತಿದೆ.

ಮಮತಾರವರ ಉಪವಾಸ ಇಪ್ಪತ್ತೆರಡನೇ ದಿನಕ್ಕೆ ಕಾಲಿಟ್ಟಿದ್ದರೂ ಸಹ ಬುದ್ಧದೇವ ಭಟ್ಟಾಚಾರ್‌ಜಿ ಕಲ್ಲೆದೆ ಮಾಡಿಕೊಂಡು ಟಾಟಾ ಮತ್ತು ಅವರಂಥ ಕೈಗಾರಿಕೋದ್ಯಮಿಗಳ ಕೈಗೊಂಬೆಯಾಗಿರುವುದು ಎಂಥ ದುರಂತ? ಮಮತಾ ಮೂಲತಃ ರಾಜಕಾರಣಿ ಎಂಬುದೇನೋ ನಿಜವೇ. ಆದರೆ ರಾಜಕಾರಣಿಗಳಲ್ಲಿಯೂ ಒಮ್ಮೊಮ್ಮೆ ಸದ್ವಿವೇಕ ಮೂಡುತ್ತದೆ. ಬುದ್ಧದೇವ ಭಟ್ಟಾಚಾರ್‌ಜಿ ಸಹ ರಾಜಕಾರಣಿ. ಸಾಲದ್ದಕ್ಕೆ ಸಾಮ್ಯವಾದಿ ಪಕ್ಷದ ನಾಯಕ. ಈ ರಾಜಕಾರಣಿಗಳ ಮಧ್ಯ ಮಮತಾರವರ ಉನ್ನತ ಉದ್ದೇಶಕ್ಕೆ ರಾಜಕಾರಣದ ಬಣ್ಣ ಏರಿರುವುದು ಬಹು ಕಳವಳಕಾರಿಯಾದ ಸಂಗತಿಯಾದರೂ ಒಂದು ರಾಜಕೀಯದ ಮುಳ್ಳನ್ನು ಇನ್ನೊಂದು ರಾಜಕೀಯದ ಮುಳ್ಳಿನಿಂದ ತೆಗೆಯ ಬೇಕಾದಂಥ ಪರಿಸ್ಥಿತಿ ಉಂಟಾಗಿದೆ. ಅಂಥ ಪ್ರಯತ್ನವನ್ನು ಮಮತಾ ಮಾಡುತ್ತಿದ್ದಾರೆ. ರೈತರ ಬಗ್ಗೆ ಕಳಕಳಿ ಇದ್ದರೆ ಅಂದರೆ ಸರ್ಕಾರದ ಏಕಪಕ್ಷೀಯ ಅಭಿವೃದ್ಧಿ ನೀತಿಯ ಬಗ್ಗೆ ವಿರೋಧವಿದ್ದರೆ ಅಂಥವರೆಲ್ಲ ತಮ್ಮೊಂದಿಗೆ ಕೈಗೂಡಿಸಲಿ ಎಂದು ಮಮತಾ ಕರೆ ಕೊಟ್ಟಿದ್ದಾರೆ. ಈಗಾಗಲೆ ಮೇಧಾ ಪಾಟ್ಕರ್, ಅರುಂಧತಿ ರಾಯ್ ಮತ್ತು ಮ್ಯಾಗ್ಸಸ್ಸೆ ಪ್ರಶಸ್ತಿ ವಿಜೇತೆ ಮಹಾಶ್ವೇತಾದೇವಿ ಮುಂತಾದ ಗಣ್ಯ ಮಹಿಳೆಯರು ತಮ್ಮ ಬೆಂಬಲ ಸೂಚಿಸಿದ್ದಾರೆ. ಪಶ್ಚಿಮ ಬಂಗಾಳ ರಾಜ್ಯವನ್ನು ಅತ್ಯಂತ ಕೈಗಾರಿಕಾಗೊಂಡ ರಾಜ್ಯವನ್ನಾಗಿ

ಮಾಡಲು Perform or Perish ಎಂದು ಬುದ್ಧದೇವ ಭಟ್ಟಾಚಾರ್‌ಜಿ ಕರೆಕೊಟ್ಟಿದ್ದಾರೆ. ಒಬ್ಬರ ಕರೆ ಉತ್ತರ ಧ್ರುವದಲ್ಲಿ ಇದ್ದರೆ, ಇನ್ನೊಬ್ಬರ ಕರೆ ದಕ್ಷಿಣ ಧ್ರುವದಲ್ಲಿ ಇದೆ. ಈ ಎರಡು ಧ್ರುವಗಳ ಮಧ್ಯ ಆರ್ಥಿಕ ತಜ್ಞರಾದ ಮನಮೋಹನ್ ಸಿಂಗ್, ಚಿದಂಬರಂ ಮತ್ತು ಮೊಂಟೆಕ್ ಸಿಂಗ್ ಅಹ್ಲುವಾಲಿಯಾ ಇದ್ದಾರೆ. ಈ ಮೂವರೂ ಸಹ ಭಸ್ಮಾಸುರನ ರೂಪಕದಲ್ಲಿರುವ ಅಭಿವೃದ್ಧಿಯ ಆರಾಧಕರಾಗಿದ್ದಾರೆ. ಟಾಟಾ ಕಂಪನಿಯವರು ಈಗಾಗಲೆ ಹೊಂದಿರುವ ೩೫೦ ಎಕರೆ ಭೂಮಿ ವರ್ಷವೊಂದಕ್ಕೆ ಮೂರೂವರೆ ಲಕ್ಷ ಕಾರುಗಳನ್ನು ಉತ್ಪಾದಿಸಲು ಸಾಕು, ಹಾಗಿರುವಾಗ ಅವರಿಗೆ ಒಂದು ಸಾವಿರ ಎಕರೆ ಭೂಮಿ ಏಕೆ ಬೇಕು ಎಂಬುದು ಮಮತಾರವರ ಪ್ರಶ್ನೆ. ಸ್ವಾತಂತ್ರ್ಯ ಪೂರ್ವದಲ್ಲಿ ಇಂಗ್ಲಿಷ್ ಸರ್ಕಾರದಿಂದ ಆಗುತ್ತಿದ್ದ ಭಾರತದ ಶೋಷಣೆಯ ವಿರುದ್ಧ, ರೈತರ ಶೋಷಣೆಯ ವಿರುದ್ಧ ಚಂಪಾರಣ್ಯದಲ್ಲಿ, ಬಾರ್ಡೋಲಿಯಲ್ಲಿ ಗಾಂಧೀಜಿಯವರು ಸತ್ಯಾಗ್ರಹ ನಡೆಸಿ ರೈತರಿಗೆ ಸಲ್ಲಬೇಕಾಗಿದ್ದ ನ್ಯಾಯವನ್ನು ಒದಗಿಸಿಕೊಟ್ಟಿದ್ದರು. ಉಪ್ಪಿನ ಸತ್ಯಾಗ್ರಹ ನಡೆಸಿ ಬಡವರೆಲ್ಲರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ಉಪ್ಪು ಸಿಗುವಂತೆ ಮಾಡಿದ್ದರು. ಸ್ವಾತಂತ್ರ್ಯ ನಂತರ ಬಹುತೇಕ ಎಲ್ಲ ರಾಜ್ಯಗಳಲ್ಲಿ ಭೂ ಸುಧಾರಣಾ ಕಾನೂನು ಜಾರಿಗೆ ಬಂದು ಉಳುವವನಿಗೆ ಭೂಮಿ ಕೊಡಿಸಲಾಯಿತು. ೧೯೫೨ರಲ್ಲಿ ವಿನೋಬಾ ತಮ್ಮ ದೇಶವ್ಯಾಪಿ ಭೂದಾನ ಆಂದೋಲನವನ್ನು ನಡೆಸಿ ಭೂ ಮಾಲೀಕರಿಂದ ಭೂ ಹೀನರಿಗೆ ದಾನದ ರೂಪದಲ್ಲಿ ಭೂಮಿ ಕೊಡಿಸಿ ಅಹಿಂಸಕ ಸಮಾಜದ ನಿರ್ಮಿತಿಗೆ ಬುನಾದಿ ಹಾಕಿದರು. ವಿಪರ್ಯಾಸವೆಂದರೆ ಸ್ವಾತಂತ್ರ್ಯ ಭಾರತದ ಮೊದಲ ಗೃಹ ಮಂತ್ರಿಯಾಗಿದ್ದ ಸರ್ದಾರ್ ಪಟೇಲರು ೧೫ ವರ್ಷಗಳ ಸತತ ಪ್ರಯತ್ನದಿಂದ ಆಗ ದೇಶದಲ್ಲಿದ್ದ ೫೫೪ ಸಂಸ್ಥಾನಗಳನ್ನು ಗಣರಾಜ್ಯಕ್ಕೆ ಸೇರಿಸಿದರು ಆದರೆ ಈಗ ಸ್ವಾತಂತ್ರ್ಯ ಬಂದು ೬೦ ವರ್ಷಗಳ ನಂತರ ಅಷ್ಟೇ ಸಂಖ್ಯೆಯ ಖಾಸಗೀ ಸಂಸ್ಥಾನಗಳು ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ತಲೆಯೆತ್ತುತ್ತಿವೆ. ಯಾವ ಚೈನಾ ದೇಶದಿಂದ ಭಾರತವು ವಿಶೇಷ ಆರ್ಥಿಕ ವಲಯಗಳ ಪ್ರೇರಣೆಯನ್ನು ಪಡೆಯಿತೊ ಆ ದೇಶದಲ್ಲಿ ಇದುವರೆಗೆ ಕೇವಲ ಅರು ಆರ್ಥಿಕ ವಲಯಗಳಿವೆ. ವಿಶ್ವದಾದ್ಯಂತ ೪೦೦ ವಲಯಗಳಿವೆ ಆದರೆ ಬಡತನ ಮತ್ತು ನಿರುದ್ಯೋಗ, ಜನಸಂಖ್ಯಾಸ್ಫೋಟ ಮುಂತಾದ ಸಮಸ್ಯೆಗಳಿಂದ ನರಳುತ್ತಿರುವ ನಮ್ಮ ದೇಶದಲ್ಲಿ ಈಗ ೩೯೯ ಆರ್ಥಿಕವಲಯಗಳು ತಲೆಯೆತ್ತುತ್ತಿವೆ ಎಂದರೆ ನಮ್ಮ ದೇಶ ನಿಜವಾದ ಅಭಿವೃದ್ಧಿಯ ವಿರುದ್ಧ ದಿಕ್ಕಿಗೆ ಹೋಗುತ್ತಿದೆ ಎಂದಲ್ಲದೆ ಮತ್ತೇನು? ಈ ದುರ್ದೆಶೆಯನ್ನು ಪ್ರಶ್ನಿಸಿ ಮಮತಾರವರ ಉಪವಾಸವಿದೆ. ಆಮರಣಾಂತ ಉಪವಾಸದ ಮೂಲಕ ಮಮತಾರವರು ಹೊಸ ಅಂತ್ಯೋದಯದ ಬಂಡಾಯ ಬಾವುಟವನ್ನು ಹಾರಿಸಿದ್ದಾರೆ. ಬಂಗಾಳ ರಾಜ್ಯ ಮೊದಲಿನಿಂದಲೂ ಭಾರತ ದೇಶಕ್ಕೆ ಕ್ರಾಂತಿಯ ಮತ್ತು ಬಂಡಾಯದ ದಾರಿಯನ್ನು ತೋರಿಸುತ್ತಾಬಂದಿದೆ. ಈಗ ಅದೇ ರಾಜ್ಯದಿಂದ ಬಂಡಾಯದ ಸಂದೇಶ ದೇಶದ ಗಾಳಿಯಲ್ಲಿ ಪ್ರವಹಿಸುತ್ತಿದೆ. ದೇಶದಲ್ಲೆಲ್ಲ ಸಿಂಗೂರಿನ ರೀತಿಯಂಥ ಪ್ರತಿಭಟನೆ ಪ್ರಾರಂಭವಾದರೆ ಆಶ್ಚರ್ಯವೇನಿಲ್ಲ ಮತ್ತು ಅಂಥ ಪ್ರತಿಭಟನೆ ಪ್ರಾರಂಭವಾಗಬೇಕಾದದ್ದು ಸಹ ಅಗತ್ಯವಾಗಿದೆ. ತನ್ಮೂಲಕ ಭೌತಿಕ ಜಾಗತೀಕರಣದ ಕಲ್ಪನೆ ಬದಲಾಗಿ ವಿಶ್ವಮಾನುಷ ಆಧಾರದ ಜಾಗತೀಕರಣ ಬರುವಂತಾದರೆ ಅದೆಂಥ ಪವಾಡವಾದೀತು!

***

ಪ್ರಾಚೀನ ಭಾರತದ ಯಾತ್ರಾ ಪದ್ಧತಿಯ ಗುಣ ವಿಶೇಷಗಳು

– ರಾಧಾಕುಮುದ ಮುಖರ್ಜಿ

ಯಾತ್ರಾಪದ್ಧತಿ ಪ್ರಾಚೀನ ಹಿಂದೂ ನಾಗರಿಕತೆಯ ಸಂಸ್ಕೃತಿಗಳ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಜನರ ಧಾರ್ಮಿಕ ಶ್ರದ್ಧೆ ನಮ್ಮ ಈ ವಿಶಾಲ ಮಾತೃಭೂಮಿಯ ಉದ್ದಗಲಕ್ಕೂ ನಿರ್ಮಿಸಿರುವ ಈ ದೇವಾಲಯಗಳ ಮತ್ತು ಪವಿತ್ರ ಸ್ಥಳಗಳ ಒಂದು ವ್ಯಾಪಕ ವ್ಯವಸ್ಥೆಗೆ ಸರಿಸಮಾನವಾದುದನ್ನು ಜಗತ್ತಿನ ಮತ್ತಾವ ದೇಶದಲ್ಲೂ ನಾವು ಕಾಣುವುದಿಲ್ಲ. ದೇಶದ ಎಲ್ಲಾ ಭಾಗಗಳಲ್ಲಿ, ಅದರ ಚರಿತ್ರೆಯ ಎಲ್ಲ ಯುಗಗಳಲ್ಲಿ ತನ್ನ ಪ್ರಭಾವವನ್ನು ತೋರಿಸಿರುವ ಈ ವಿಶಿಷ್ಟ ಪದ್ಧತಿಯ ಉಗಮವನ್ನು ನಾವು ಎಚ್ಚರಿಕೆಯಿಂದ ಪರೀಕ್ಷಿಸಿದರೆ, ಅದು ಭಾರತೀಯನ ದೇಶಪ್ರೇಮ ಅಭಿವ್ಯಕ್ತಗೊಳ್ಳುವ ಪ್ರಕಾರಗಳಲ್ಲಿ ಒಂದೆಂಬುದಾಗಿ ನಾವು ತೀರ್ಮಾನಿಸುವುದು ಅನಿವಾರ್ಯವಾಗುತ್ತದೆ. ಯಾತ್ರಾಪದ್ಧತಿ ಅಂತಿಮವಾಗಿ ಮಾತೃಭೂಮಿಯನ್ನು ಕುರಿತು ಪ್ರೇಮದ ಒಂದು ಅಭಿವ್ಯಕ್ತಿ, ಹಿಂದೂಗಳ ರಾಷ್ಟ್ರ ಪೂಜೆಯ ವಿಶಿಷ್ಟ ರೀತಿಗಳಲ್ಲೊಂದು. ತಾಯ್ನಾಡನ್ನು ಕುರಿತು ಕಳಕಳಿಯ ತೀವ್ರತೆ ದೇಶದಲ್ಲೆಲ್ಲ ಸಾವಿರಾರು ತೀರ್ಥಕ್ಷೇತ್ರಗಳನ್ನು ನಿರ್ಮಿಸಿ, ತನ್ಮೂಲಕ ಪ್ರತಿಯೊಂದು ಭಾಗವೂ ಪವಿತ್ರವಾಗುವಂತೆ ಮತ್ತು ಪೂಜಾರ್ಹವಾಗುವಂತೆ ಮಾಡಿದೆ. ದೇಶಪ್ರೇಮಿ ಅಸಂಖ್ಯಾತ ತೀರ್ಥಕ್ಷೇತ್ರಗಳಲ್ಲಿ ಭಕ್ತಿಯಿಂದ ಸಾಷ್ಟಾಂಗವೆರಗುತ್ತಾನೆ; ಅವುಗಳಲ್ಲಿ ತಾಯ್ನಾಡಿನ ಪವಿತ್ರ ಶರೀರದ ಬೃಹತ್ತು ವಿಭಜನೆಗೊಂಡಿರುತ್ತದೆ, ಅದರ ಅಗಮ್ಯಪಾವಿತ್ರ್ಯವನ್ನು ಸಾಂತಚೇತನಗಳು ವೈಯಕ್ತಿಕವಾಗಿ ಸಾಕ್ಷಾತ್ಕರಿಸಿಕೊಳ್ಳಲೆಂಬ ಉದ್ದೇಶದಿಂದ. ಜಗತ್ತಿನಲ್ಲಿ ಬೇರೆಲ್ಲೂ ಇಲ್ಲದ ಈ ಅನನ್ಯ ಭಾರತೀಯ ಪದ್ಧತಿಯ ಹಿಂದಿರುವ ರಚನಾತ್ಮಕ ಅಂಶವನ್ನು ಇದು ನಿಸ್ಸಂದೇಹವಾಗಿ ಸೂಚಿಸುತ್ತದೆ.

ಈ ಪದ್ಧತಿಗೆ ಸಂಬಂಧಗೊಂಡಿರುವ ಶುದ್ಧ ಧಾರ್ಮಿಕ ಪುಣ್ಯ ಹಾಗೂ ಆಧ್ಯಾತ್ಮಿಕ ಲಾಭಗಳ ಹಿಂದೆ, ಸ್ಥಳವನ್ನು ಕುರಿತು ಅಭಿಮಾನದ, ಭೌಗೋಳಿಕ ಮಹತ್ವದ ತಿಳಿವಳಿಕೆಯ ಮತ್ತು ಕಲಾ ಪ್ರಶಂಸೆಯ ಮೂಲಭೂತ ವಿಷಯವುಂಟೆಂಬುದನ್ನೂ ಗಮನಿಸಬೇಕು. ಉತ್ತರದಲ್ಲಿ ಬೆನಾರಸ್ ಮತ್ತು ದಕ್ಷಿಣದಲ್ಲಿ ಕಂಚಿ–ಇವನ್ನು ಪ್ರೀತಿಸಿ ಅಲ್ಲಿಗೆ ಯಾತ್ರೆ ಹೋಗುತ್ತಾರೆ; ಧಾರ್ಮಿಕ ವ್ಯಕ್ತಿಗಳಿಂದ ಮತ್ತು ಚಳುವಳಿಗಳಿಂದ ಸಾಧುಗಳ ಮತ್ತು ವಿದ್ವಾಂಸರ ಸಾಹಚರ್ಯಗಳಿಂದ ಅವು ಪವಿತ್ರವಾಗಿವೆಯೆಂಬ ಕಾರಣದಿಂದ ಮಾತ್ರವಲ್ಲ, ಅವು ಸ್ವತಃ ಸುಂದರವಾದ ಕಾರಣಗಳಾಗಿದ್ದು "ಚಿರಸಂತೋಷ"ಗಳಾಗಿವೆ ಮತ್ತು ಶಿಲ್ಪ ಹಾಗೂ ಕಲಾಕೃತಿಗಳಿಂದ ಶ್ರೀಮಂತವಾದ ದೇಗುಲಗಳ ನಗರಗಳಾಗಿವೆ ಎಂಬ ಕಾರಣದಿಂದಲೂ ಹೌದು. ಇದೇ ಬಗೆಯಲ್ಲಿ, ಪುರಿ ಅಥವಾ ಜಗನ್ನಾಥ ಭಾರತದ ಪವಿತ್ರತಮ ಸ್ಥಳಗಳಲ್ಲೊಂದಾಗಿ ಬೆಳೆದುದಕ್ಕೂ ಸಮುದ್ರದ ಸೌಂದರ್ಯಕ್ಕೂ ಬಹಳ ಸಂಬಂಧವಿದೆ; ಇದರ ಜೊತೆಗೆ, ಅದು ಬಹಳ ಕಾಲ ಭಾರತದ ಪೌರ್ವಾತ್ಯ ವ್ಯಾಪಾರಕ್ಕೆ ಬಂದರಾಗಿತ್ತೆಂಬ ಚಾರಿತ್ರಿಕ ಅಂಶವೂ ಪ್ರಾಯಶಃ ಸೇರಿ ಕೊಂಡಿದೆ. ಹಾಗೆಯೆ, ಅಲಹಾಬಾದ್ ಎರಡು ಮಹಾನದಿಗಳ ಸಂಗಮ

ಸ್ಥಾನದಲ್ಲಿರುವ ಭಾಗ್ಯ ಪಡೆದಿರುವುದರಿಂದ, ಅದು ಅನಿವಾರ್ಯವಾಗಿ ತೀರ್ಥ ಕ್ಷೇತ್ರಗಳ ರಾಜನಾಗುತ್ತದೆ. ಮತ್ತೆ, ಹಿಮಾಲಯಗಳ ಚಿರಂತನ ಸೌಂದರ್ಯ ಭಾರತದ ರಾಷ್ಟ್ರೀಯ ಮನಸ್ಸಿನ ಮೇಲೆ ತನ್ನ ಅಮರ ಮುದ್ರೆಯನ್ನೊತ್ತಿದೆ ಮತ್ತು ಅವುಗಳನ್ನು ಧ್ಯಾನ ಭಕ್ತಿಗಳ ಶ್ರೇಷ್ಠ ಧಾಮವನ್ನಾಗಿ ಮಾಡಿದೆ; ಯಾತ್ರಿಕರ ನಿರಂತರ ಪ್ರವಾಹಗಳು ಅತ್ತ ಹರಿಯುತ್ತವೆ. ಅಷ್ಟೇಕೆ, ಹಿಂದೂಗಳ ಯಾತ್ರಾಸ್ಥಳಗಳು ಯಾವಾಗಲೂ ಮಂಜು ಮುಸುಕಿದ ಪರ್ವತಗಳೊ ತಾಳೆಮರಗಳು ಬೆಳೆದ ಸಾಗರತೀರಗಳೊ ಸಮುದ್ರ ದ್ವೀಪವೊ ಅಥವಾ ಅಭೇದ್ಯವಾದ ಗಿರಿಕಾನನಗಳೊ ಆಗಿರುತ್ತವೆ – ಅಲ್ಲಿ ಮನುಷ್ಯನ ನಡಗೆಯ ಸದ್ದು ಕೇಳಿಬರುವುದು ವಿರಳ, ಪ್ರಕೃತಿ ತನ್ನ ಆಧ್ಯಾತ್ಮಿಕ ಶಕ್ತಿಗಳನ್ನು ಅನಿರ್ಬಾಧಿತವಾಗಿ ಪ್ರಯೋಗಿಸಲು ಅಲ್ಲಿ ಸ್ವತಂತ್ರಳಾಗಿರುತ್ತಾಳೆ.

ಅನ್ಯ ದೇಶೀಯರಿಗೆ ಅಪರಿಚಿತವಾದ ಒಂದು ವಿಲಕ್ಷಣವಾದ ರೀತಿಯಲ್ಲಿ ಸ್ಥಳೀಯ ಸೌಂದರ್ಯವನ್ನು ಒಬ್ಬ ಹಿಂದೂ ಪರಿಗಣಿಸುತ್ತಾನೆ; ಅದನ್ನು ಅವನು ಮೆಚ್ಚುವ ಮತ್ತು ಕೀರ್ತಿಸುವ ವಿಧಾನ ತೀರ ಭಿನ್ನವೂ ಆದದ್ದು. ಒಂದು ನಿರ್ದಿಷ್ಟ ಸ್ಥಳದ ನೈಸರ್ಗಿಕ ಸೌಂದರ್ಯವನ್ನು ಯಾವ ಗೌರವ ಭಾವನೆಗಳಿಂದ ಭಾರತೀಯ ಪರಿಗಣಿಸುತ್ತಾನೆಂಬುದನ್ನು ತೋರಿಸುವ ಪ್ರಮಾಣಗಳು ನಮ್ಮ ಸಂಸ್ಕೃತ ಸಾಹಿತ್ಯದಲ್ಲೆಲ್ಲ ತುಂಬಿವೆ. ಅದು ಅವನಿಗೆ ಸ್ವಸಂತೃಪ್ತಿಯ ಅಥವಾ ಕೇವಲ ಇಂದ್ರಿಯ ವಿಷಯಕವಾದ ಸಾಮಾಜಿಕ ಸುಖದ ಯಾವ ಭಾಷೆಗಳನ್ನೂ ಧ್ವನಿಸುವಂತಿಲ್ಲ; ಏಕೆಂದರೆ, ಅದು ಅವನ ಪಾಲಿಗೆ ಸ್ವ – ಸಂಯಮದ ದೇವರೆಡೆಗೆ ಕರೆದೊಯ್ಯುವ ಏಕಾಂತ ಧ್ಯಾನದ, ಪವಿತ್ರ ನಿರ್ಧಾರಗಳ ದೃಢೀಕರಣದ ಮತ್ತು ಧಾರ್ಮಿಕ ಪ್ರವೃತ್ತಿಯ ಬಲಸಂವರ್ಧನದ ತಾಣವಾಗಿದೆ. ದಿವಂಗತ ಸೋದರಿ ನಿವೇದಿತಾ ಹೇಳಿದಂತೆ, ನಯಾಗರಾ ಜಲಪಾತ ಗಂಗಾನದಿಯ ಮೇಲಿದ್ದ ಪಕ್ಷದಲ್ಲಿ ಮಾನವಕುಲ ಅದನ್ನು ಬೆಲೆ ಕಟ್ಟುವ ರೀತಿ ಎಷ್ಟು ಭಿನ್ನವಾಗುತ್ತಿತ್ತು! ವಿಹಾರ ಮತ್ತು ಸುಖ ಪ್ರವಾಸಗಳ ಬದಲು, ಪೂಜಾ ಭಾವನೆಯುಳ್ಳ ಜನಜಂಗುಳಿಯ ಅನಂತಯಾತ್ರೆ; ಸುಖೋಪವನಗಳ ಬದಲು ಆಶ್ರಮಗಳು; ಹೋಟೆಲುಗಳ ಬದಲು ದೇಗುಲಗಳು; ವಿಷಯ ಲೋಲುಪತೆಯ ಬದಲು ಸಂಯಮಪೂರ್ಣ ವೈರಾಗ್ಯದ ಸರಳತೆ ಮತ್ತು ಕಾಠಿಣ್ಯ; ಅಥವಾ ಒಂದು ಪ್ರೇರಕ ಶಕ್ತಿಯ ಸೃಷ್ಟಿಯಿಂದ ಆರ್ಥಿಕ ಪ್ರಯೋಜನಗಳನ್ನುತ್ಪಾದಿಸುವ ಗುರಿಗೆ ಅದನ್ನೊಂದು ಅದ್ಭುತ ಸಾಧನವನ್ನಾಗಿ ಪರಿಗಣಿಸುವುದರ ಬದಲು, ವಸ್ತುನಿಷ್ಠತೆಯ ವಿರುದ್ಧ ಒಂದು ಪ್ರತಿಕ್ರಿಯೆ, ಹೆಚ್ಚು ಆಕರ್ಷಕವಾದ ವ್ಯಕ್ತಿನಿಷ್ಠತೆ, ಆಧ್ಯಾತ್ಮಿಕ ಜೀವನವನ್ನು ಪುಷ್ಟಿಗೊಳಿಸಲೋಸುಗ ದೇಹದಿಂದ ಮತ್ತು ಬಾಹ್ಯ ಭೌತ ಪ್ರಪಂಚದಿಂದ ಪರಜ್ಮುಖವಾಗುವಿಕೆ.

ಅಪರಿಮಿತವಾದ ದೇಶ ಪ್ರೇಮ ಭಾರತದಲ್ಲೆಲ್ಲ ಸ್ಥಾಪಿಸಿರುವ ಅಸಂಖ್ಯಾತ ತೀರ್ಥಕ್ಷೇತ್ರಗಳನ್ನು ಸಂಪೂರ್ಣವಾಗಿ ಪಟ್ಟಿ ಮಾಡುವುದು ಕಷ್ಟ. ಅವುಗಳ ಅತ್ಯುತ್ತಮ ಪಟ್ಟಿಗಳಲ್ಲೊಂದು ಮಹಾಭಾರತದ ವನಪರ್ವದಲ್ಲಿ ಸಿಗುತ್ತದೆ; ಅಲ್ಲಿ ನಾರದ ಮತ್ತು ಧೌಮ್ಯ ಪುಣ್ಯಕ್ಷೇತ್ರಗಳನ್ನು ಹೆಸರಿಸಿದ್ದಾರೆ. 'ಗರುಡ ಪುರಾಣ'ದ ಅರವತ್ತಾರನೆಯ ಅಧ್ಯಾಯವೂ ಸೊಗಸಾದ ಪಟ್ಟಿಯೊಂದನ್ನು ಕೊಡುತ್ತದೆ; ಆದರೆ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಸಮಿಕ್ಷೆ ನಡೆಸಿ, ಪವಿತ್ರ ಸ್ಥಳಗಳನ್ನು ಗುರುತಿಸುವ ಎಂಭತ್ತೊಂದನೆಯ ಅಧ್ಯಾಯದಲ್ಲಿ ಅತ್ಯಂತ ಪರಿಪೂರ್ಣವಾದ ಪಟ್ಟಿ ದೊರಕುತ್ತದೆ. 'ಪೀಠಸ್ಥಾನಗಳನ್ನು ಕುರಿತು ವಿವಿಧ ವರ್ಣನೆಗಳಲ್ಲಿ ಬೇರೆ ಬೇರೆ ಪಟ್ಟಿಗಳುಂಟು.

'ತಂತ್ರಚೂಡಾಮಣಿ ೫೨ ಪುಣ್ಯಕ್ಷೇತ್ರಗಳನ್ನೂ 'ದೇವೀಭಾಗವತ' ೧೦೮ ಕ್ಷೇತ್ರಗಳನ್ನೂ ಹೇಳುತ್ತವೆ. ಭಾರತದಲ್ಲೆಲ್ಲ ಇರುವ ಬೇರೆ ಬೇರೆ ಸಿದ್ಧಪೀಠಗಳನ್ನು 'ಕುಬ್ಜಿಕಾತಂತ್ರ' ಹೆಸರಿಸುತ್ತದೆ. ಈ ಪುಣ್ಯಸ್ಥಳಗಳ ಪ್ರಸ್ತಾಪ 'ಕಾಳಿಕಾಪುರಾಣ'ದಲ್ಲೂ ಬಂದಿದೆ.

ಭಾರತದ ವಿವಿಧ ಭಾಗಗಳನ್ನು ಗುರುತಿಸುವ ಮತ್ತು ಅವುಗಳಿಗೆಲ್ಲ ಸಮಾನವಾದ ಒಂದು ಪಾವಿತ್ರ್ಯವನ್ನು ದಯಪಾಲಿಸುವ ಈ ಬೇರೆ ಬೇರೆ ಪುಣ್ಯಕ್ಷೇತ್ರಗಳಲ್ಲಿ ಒಂದೂ ಕೂಡ ಮಾತೃಭೂಮಿಯ ಗಡಿಗಳಿಂದಾಚೆ ನೆಲೆಗೊಂಡಿಲ್ಲವೆಂಬುದು ಗಮನಾರ್ಹ. ತನ್ನ ಮೂವತ್ತು ಮೂರು ಕೋಟಿ ದೇವತೆಗಳಲ್ಲಿ ಯಾವುದೊಂದು ದೇವತೆಗಾಗಲಿ ಅಥವಾ ತನ್ನ ದೇಶವನ್ನು ಪ್ರಖ್ಯಾತಗೊಳಿಸಿರುವ ಅಸಂಖ್ಯಾತ ಧಾರ್ಮಿಕ ವೀರರು, ಸಾಧುಗಳು ಮತ್ತು ಋಷಿಗಳಲ್ಲಿ ಯಾರಿಗೇ ಆಗಲಿ ತನ್ನ ಗೌರವವನ್ನು ಸಲ್ಲಿಸಲು ಭಾರತೀಯನಾದವನು ತನ್ನ ತಾಯ್ನಾಡಿನ ಪವಿತ್ರ ಎಲ್ಲೆ ಕಟ್ಟನ್ನು ಮೀರಿ ಯಾವುದೋ ದೂರದ ಪಾಲೆಸ್ತೈನಿಗೆ ಪ್ರವಾಸ ಹೋಗಬೇಕಾಗಿಲ್ಲ. ತನ್ನ ಸ್ವದೇಶದ ಮೇಲೆ ಅವನಿಗೆಷ್ಟು ಮೋಹವೆಂದರೆ, ಯಾವುದೇ ಪರದೇಶಕ್ಕೆ ಯಾವುದೇ ರೀತಿಯ ನಿಷ್ಠೆ ತೋರಬೇಕೆಂಬ ಆಲೋಚನೆಯೇ ಅವನಿಗೆ ಬರುವುದಿಲ್ಲ; ಹಾಗೆ ಮಾಡಿದರೆ, ಅವನ ಮಾತೃಭೂಮಿಯ ನಿಷ್ಠೆಗೆ ದ್ರೋಹವೆಸಗಿದಂತಾಗುತ್ತದೆ. ಹಿಂದೂವಿನ ದೇಶಭಕ್ತಿ ಬಹಳ ಅಸೂಯಾಪರಳಾದ ಹೆಣ್ಣಿನಂತೆ. ಮತ್ತಾವ ಬಾಹ್ಯ ಸಂಬಂಧಗಳಿಗೂ ಅದು ಅವಕಾಶ ನೀಡುವುದಿಲ್ಲ. ತನ್ನ ಜಾತಿ, ಮತ, ಗುಂಪು, ಪಂಥ, ಸಂಸ್ಕೃತಿ, ಧರ್ಮಗಳ ಬಹುತ್ವದಲ್ಲಿ ಭಾರತ ವಿಶಿಷ್ಟವಾಗಿದೆ. ಆದರೆ ಅದು ಅವೆಲ್ಲವುಗಳ ತೊಟ್ಟಿಲೂ ಅವುಗಳ ಸಂಸ್ಥಾಪಕರ ಜನ್ಮಸ್ಥಾನವೂ ಆಗಿದೆ. ಹಿಂದೂವಿನ ತಾಯ್ನಾಡು ಭೌತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಸ್ವಯಂಪೂರ್ಣವಾದುದು; ಉದಾತ್ತ ಜೀವನಕ್ಕೆ ಸಹಾಯಗಳೆಲ್ಲ ಅದರ ಗಡಿಯೊಳಗಿವೆ; ಧಾರ್ಮಿಕ ಸ್ಫೂರ್ತಿಯನ್ನು ಅಥವಾ ಆಧ್ಯಾತ್ಮಿಕ ಸಂಸ್ಕೃತಿಯ ನೆರವುಗಳನ್ನು ಅದರ ಪುತ್ರರು ಬೇರೆಲ್ಲೂ ಅರಸಬೇಕಾಗಿಲ್ಲ. ಆ ವಿಷಯದಲ್ಲಿ ಮಾತೃಭೂಮಿಯ ಸಮೃದ್ಧಿ ಅಕ್ಷಯವಾಗಿದೆ. ಆದ್ದರಿಂದಲೇ ಈ ದೇಶಪ್ರೇಮ ಭಾರತದ ಅಸಂಖ್ಯ ದೇವಾಲಯಗಳನ್ನು ಮತ್ತು ತೀರ್ಥಕ್ಷೇತ್ರಗಳನ್ನು ದೇಶದ ಭೌಗೋಳಿಕ ಮೇರೆಗಳೊಳಗೆ ಪರಿಮಿತಗೊಳಿಸಿ, ಪ್ರಾಚೀನ ಹಿಂದೂ ಸಂಸ್ಕೃತಿ ನಾಗರಿಕತೆಗಳ ಅತ್ಯಂತ ಮುಖ್ಯವಾದ ವೈಶಿಷ್ಟ್ಯವೊಂದಕ್ಕೆ ಎಡೆ ಮಾಡಿ ಕೊಟ್ಟಿದೆ. ತನ್ಮೂಲಕ, ದೇಶಪ್ರೇಮದ ಸಾರ್ವತ್ರಿಕ ಮಾನವ ಭಾವವನ್ನು ಹಿಂದೂ ವ್ಯಕ್ತಪಡಿಸುವ ಬಗೆಯನ್ನು ತೋರಿಸಿಕೊಟ್ಟಿದೆ.

ಯಾತ್ರಾಪದ್ಧತಿ ಹಿಂದೂಗಳ ದೇಶಪ್ರೇಮದ ಅಭಿವ್ಯಕ್ತಿ ಪ್ರಕಾರವಾಗಿರುವುದರ ಜೊತೆಗೆ, ರಾಷ್ಟ್ರೀಯ ಸ್ವಭಾವದ ಮೇಲೆ ಇನ್ನೊಂದು ಅತ್ಯಂತ ಮಹತ್ವದ ಪರಿಣಾಮವನ್ನುಂಟುಮಾಡುತ್ತದೆ. ದೇಶ ಪ್ರೇಮವನ್ನು ಅದು ಪೋಷಿಸಿ ಕಾಪಾಡುವುದು ಮಾತ್ರವಲ್ಲ, ಜನರ ಭೌಗೋಳಿಕ ಪ್ರಜ್ಞೆಯನ್ನೂ ವಿಸ್ತರಿಸುತ್ತದೆ; ಹಾಗಿಲ್ಲದಿದ್ದರೆ ಆ ಪ್ರಜ್ಞೆ ಯಾವುದೋ ಒಂದು ಪ್ರಾಂತ್ಯಕ್ಕೆ ಅಥವಾ ಸ್ಥಳಕ್ಕೆ ಮಾತ್ರ ಪರಿಮಿತವಾಗಬಹುದಿತ್ತು. ಜನರಲ್ಲಿ ಭೌಗೋಳಿಕವಾದ ಅರಿವನ್ನು ಬೆಳಸುವುದರಲ್ಲಿ ಯಾತ್ರಾಪದ್ಧತಿ ನಿಶ್ಚಯವಾಗಿಯೂ ಒಂದು ಶಕ್ತಿ ಸಾಧನವಾಗಿದೆ; ಭಾರತ ಕೇವಲ ಭೌಗೋಳಿಕ ತುಣುಕುಗಳ ಒಂದು ಸಮೂಹವಲ್ಲ, ಅದು ಅಗಾಧವಾಗಿದ್ದರೂ ಏಕವಾಗಿರುವ ಮತ್ತು ಈ ತುದಿಯಿಂದ ಆ ತುದಿಯವರಗೆ ಒಂದು ಜೀವಪ್ರವಾಹದ ಸೂತ್ರವನ್ನುಳ್ಳ ಅವಿಭಾಜ್ಯ ಶರೀರ ಎಂಬುದನ್ನು

ಜನ ಅರಿತುಕೊಳ್ಳಲು ಅದು ನೆರವಾಗುತ್ತದೆ. ಈ ವಿಸ್ತಾರವಾದ ದೇಶದಲ್ಲೆಲ್ಲಾ ಹರಡಿರುವ ಅಸಂಖ್ಯ ಪುಣ್ಯಕ್ಷೇತ್ರಗಳ ಪರಿಭಾವನೆ ಅವಿದ್ಯಾವಂತರಾದ ಲಕಾಂತರ ಜನರ ಭೌಗೋಳಿಕ ದಿಗಂತವನ್ನು ಅನಿವಾರ್ಯವಾಗಿ ವಿಸ್ತರಿಸುತ್ತದೆ; ಅವರ ಪಾಲಿಗೆ ಯಾತ್ರೆಯ ಬಾಹ್ಯವಿಧಿ ಧರ್ಮದ ಬಹುಭಾಗವನ್ನು ಪ್ರತಿನಿಧಿಸುತ್ತದೆಯಾದ್ದರಿಂದ, ಅವರು ಸಹಜವಾಗಿಯೆ ತಮ್ಮ ಸಂಕುಚಿತ ಜನ್ಮಸ್ಥಳದ ಪರಿಮಿತಿಗಳನ್ನು ವಿಸ್ತರಿಸಿಕೊಳ್ಳುತ್ತಾರೆ ಮತ್ತು ಅದನ್ನು ತಾವು ಧಾರ್ಮಿಕ ಅಗತ್ಯಗಳಿಂದ ಪ್ರವಾಸ ಮಾಡುವ ವಿಶಾಲತರ ಪ್ರದೇಶದೊಡನೆ ಸಮೀಕರಿಸುವುದನ್ನು ಕಲಿಯುತ್ತಾರೆ. ಆದ್ದರಿಂದ ಈ ಪದ್ಧತಿ ಭೌಗೋಳಿಕ ಪ್ರಜ್ಞೆಯ ಬಗೆಗೆ ಜನತೆಗೆ ಶಿಕ್ಷಣ ನೀಡುವ ಅತ್ಯಂತ ಪ್ರಭಾವಿ ಸಾಧನ. ಅದು ಇದೇ ರಾಷ್ಟ್ರದ ಅಗತ್ಯಗಳಿಗೆ ಪ್ರತಿಕ್ರಿಯೆಯಾಗಿ ಬೆಳೆದಿದೆ; ಕೇವಲ ಸುಸಂಸ್ಕೃತವಾದ ಮತ್ತು ಮುಂದುವರಿದ ವರ್ಗಗಳ ಅವಶ್ಯಕತೆಗಳನ್ನು ಪೂರೈಸಲೆಂದಲ್ಲ. ಆದ್ದರಿಂದ ಭಾರತದ ಬಹುಪಾಲು ಜನತೆಯ ಮೇಲೆ ಪರಿಣಾಮವೆಸಗುವ ಈ ಯಾತ್ರಾ ಪದ್ಧತಿ ಸಾಮೂಹಿಕ ಶಿಕ್ಷಣ ನೀಡುವ, ತಮ್ಮ ದೇಶದ ಭೌಗೋಳಿಕ ಗಡಿಗಳ ಬಗೆಗೆ ಜನರಲ್ಲಿ ಪ್ರಜ್ಞೆಯನ್ನುಂಟುಮಾಡುವ, ಅದರ ವಿಸ್ತಾರವೈವಿಧ್ಯಗಳನ್ನೂ ನೈಸರ್ಗಿಕ ಶಕ್ತಿ ಸಂಪನ್ಮೂಲ ಸಾಧ್ಯತೆಗಳನ್ನೂ ಅರಿವು ಮಾಡಿ ಕೊಡುವ ಒಂದು ಅತ್ಯಂತ ಶಕ್ತಿಯುತ ಪರಿಕರವಾಗಿದೆಯೆಂಬುದನ್ನು ಅಲ್ಲಗೆಳೆಯುವಂತಿಲ್ಲ.

ಅಲ್ಲದೆ, ಒಂದು ಅವಶ್ಯಕರ್ತವ್ಯವಾಗಿ ಪುಣ್ಯಕ್ಷೇತ್ರಗಳಿಗೆ ಹೋಗತಕ್ಕದ್ದು ಪ್ರವಾಸವನ್ನು ಭಾರತದ ಒಂದು ರಾಷ್ಟ್ರೀಯ ಗುಣವನ್ನಾಗಿ ಮಾಡಿದೆ; ಅದು ಬದುಕಿನ ಎಲ್ಲ ಅವಸ್ಥೆಗಳಲ್ಲಿ, ಆಬಾಲವೃದ್ಧರಲ್ಲಿ ಕಂಡುಬರುವ ಗುಣ. ಯಂತ್ರ ಯುಗಕ್ಕಿಂತ ಮುಂಚೆ ಇದ್ದ ಪ್ರವಾಸದ ಸ್ಥಿತಿಗಳನ್ನು ಪರಿಗಣಿಸಿದಾಗ, ಇಂದಿನ ವೇಗ ಮತ್ತು ಸೌಲಭ್ಯಗಳನ್ನು ಬಳಸಿಕೊಂಡು ಆಧುನಿಕ ಪ್ರವಾಸಿಗಳು ಪಡೆಯುವುದಕ್ಕಿಂತ ಹೆಚ್ಚು ಆಳವಾದ ಜ್ಞಾನವನ್ನು ಹಿಂದಿನವರು ತಾವು ಕಂಡ ಸ್ಥಳಗಳ ಬಗ್ಗೆ ಪಡೆಯುತ್ತಿದ್ದರೆನ್ನಬಹುದು. ಹಿಂದಿನ ಕಾಲದಲ್ಲಿ ಆಧುನಿಕವಾದ ರೈಲು ಮುಂತಾದ ಪ್ರಯಾಣ ಸೌಲಭ್ಯಗಳ ಸ್ಥಾನದಲ್ಲಿ ನಿಂತು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಜನರ ಪ್ರಯಾಣವನ್ನು ಪ್ರಾಂತಗಳ ನಡುವೆ ಸಂಪರ್ಕವನ್ನೂ ಉಂಟುಮಾಡಿ, ಒಟ್ಟು ದೇಶದ ಆತ್ಮೀಯ ಪರಿಚಯವೊಂದನ್ನು ದೊರಕಿಸುತ್ತಿದ್ದುದು ಭಾರತದ ವಿಶಿಷ್ಟವಾದ ಈ ಪದ್ಧತಿಯೇ. ಭೌತಿಕ ಅನುಕೂಲಗಳಿಲ್ಲದಿದ್ದುರಿಂದ ಪ್ರವಾಸವು ಪ್ರಾಚೀನ ಭಾರತದಲ್ಲಿ ಜನಪ್ರಿಯವಾಗಿರಲಿಲ್ಲವೆಂಬ ಸಿದ್ಧಾಂತವನ್ನು ನಾವು ತಳ್ಳಿಹಾಕಬೇಕು. ತದ್ವಿರುದ್ಧವಾಗಿ, ಅದೊಂದು ವ್ಯಾಪಕವಾದ ರಾಷ್ಟ್ರೀಯವಾದ ಸ್ವಭಾವವಾಗಿತ್ತು; ಇಂಡೊ-ಆರ್ಯನ್ ನಾಗರಿಕತೆ ದೇಶದ ಆದ್ಯಂತ ಹರಡಿದ್ದಕ್ಕೆ, ಅಸಂಖ್ಯಾತ ಪಂತಗಳು ಮತ್ತು ಸಂಸ್ಕೃತಿಗಳು ತಮ್ಮ ಜನ್ಮಸ್ಥಾನದ ಗಡಿಗಳನ್ನು ದಾಟಿ ಬಹುದೂರದ ಪ್ರಾಂತಗಳಲ್ಲಿ ಹರಡಿ ಪ್ರಭಾವ ಬೀರಿದ್ದಕ್ಕೆ ಆ ಪ್ರವಾಸಪದ್ಧತಿಯೆ ಕಾರಣವೆನ್ನಬೇಕು. ಆದ್ದರಿಂದಲೆ ಬನಾರಸಿನ ಸಾರನಾಥಧ ಹರಿಣೋದ್ಯಾನದಲ್ಲಿ ಬುದ್ಧ ಮಾಡಿದ ಉಪದೇಶ ಕ್ರಮೇಣ ತನ್ನ ಪ್ರಭಾವವನ್ನು ವಿಸ್ತರಿಸಿ ಭಾರತದ ಇತರ ಭಾಗಗಳಲ್ಲೂ ಅದರಿಂದಾಚೆಗೂ ಹಬ್ಬಿದ್ದು-ಆದ್ದರಿಂದಲೆ ಶಂಕರಾಚಾರ್ಯರು ಇಡೀ ದೇಶದ ಆಧ್ಯಾತ್ಮಿಕ ದಿಗ್ವಿಜಯವನ್ನು ಸಾಧಿಸಿ, ಭಾರತದ ನಾಲ್ಕೂ ಮೂಲೆಗಳಲ್ಲಿ ಆ ವಿಜಯದ ಸ್ತಂಭಗಳನ್ನು ಸ್ಥಾಪಿಸಲು ಸಮರ್ಥರಾದದ್ದು. ಆದ್ದರಿಂದಲೆ ದಕ್ಷಿಣದಲ್ಲಿ ಒಬ್ಬ ರಾಮಾನುಜ ಅಥವಾ ಒಬ್ಬ ಮಧ್ವ ಉತ್ತರದಲ್ಲಿ ಒಬ್ಬ ಚೈತನ್ಯ, ಒಬ್ಬ ರಮಾನಂದ, ಒಬ್ಬ ಕಬೀರ ಅಥವಾ ಒಬ್ಬ ನಾಯಕ್

ತಮ್ಮ ಮೂಲಪ್ರಭಾವದ ಪರಿಮಿತಿಗಳಿಂದಾಚೆಗೆ ತಮ್ಮನ್ನು ತಾವೆ ವಿಸ್ತರಿಸಿಕೊಂಡು ವಿಶಾಲತರ ಪ್ರದೇಶಗಳನ್ನು ಮತ್ತು ಜನತೆಯನ್ನು ವ್ಯಾಪಿಸಿದ್ದು. ಆದ್ದರಿಂದಲೆ ನಾವು ನಮ್ಮ ಚರಿತ್ರೆಯಲ್ಲಿ ಮುಖ್ಯವಾಗಿರುವ ಧಾರ್ಮಿಕ ಅಥವಾ ಜನತಾ ಚಳುವಳಿಗಳ ವಿಜಯವನ್ನು ಜನಗಳ ಯಾತ್ರಾ ಪ್ರವೃತ್ತಿಗೆ ಆರೋಪಿಸಬೇಕಾದದ್ದು. ಅದು ದೂರ ದೂರದಲ್ಲಿದ್ದ ವಿವಿಧ ಭಾಗಗಳ ನಿಕಟಜ್ಞಾನವನ್ನು ಗಳಿಸುವುದರಲ್ಲಿ ಯಂತ್ರಪೂರ್ವ ಯುಗಕ್ಕಿದ್ದ ಭೌತಿಕ ಕಷ್ಟಗಳನ್ನು ಗೆದ್ದಿತು. ವಾಸ್ತವವಾಗಿ ಅದು ಬಾಹ್ಯವಸ್ತುವಿನ ಮೇಲೆ ಮನಸ್ಸಿನ, ಭೌತದ ಮೇಲೆ ಆಧ್ಯಾತ್ಮದ ವಿಜಯ. ನೈಸರ್ಗಿಕ ಪರಿಸ್ಥಿತಿ ಅನುಕೂಲವಾಗಿದ್ದರೂ ಸಮಗ್ರ ಭಾರತವನ್ನು ಒಂದು ಮಹಾಮಾತೃಭೂಮಿಯೆಂಬುದಾಗಿ ಜನತಾ ಚಿತ್ರ ಸಾಕ್ಷಾತ್ಕರಿಸಿಕೊಂಡಿತು. ದೇಶದ ಭೌಗೋಳಿಕ ಐಕ್ಯದ ಪ್ರಜ್ಞೆಗೆ ಅಡಚಣೆಯಾಗಬಹುದಿದ್ದ ಯಾವುದೇ ಬಗೆಯ ಸಂಕುಚಿತ ಪ್ರಾಂತಭಾವನೆ ಬೆಳೆಯಲು ಈ ಪದ್ಧತಿ ಅವಕಾಶವೀಯಲಿಲ್ಲ; ತಾಯ್ನಾಡನ್ನು ಚೆನ್ನಾಗಿ ಅರಿಯುವ ಪವಿತ್ರ ಕಾರ್ಯಕ್ಕೆ ದೈಹಿಕ ಸುಖಗಳ ಪರಿವೆ ಅಡ್ಡಿಯಾಗಲು ಅದು ಆಸ್ಪದ ಕೊಡಲಿಲ್ಲ; ಹತ್ತಿರದಲ್ಲೆ ಇದ್ದ ಅನುಕೂಲವಾದ ಪವಿತ್ರ ನಿಲ್ದಾಣಗಳಲ್ಲಿ ಯಾತ್ರಿಕ ತಂಗುವಂತೆ ಮಾಡುವುದರ ಮೂಲಕ ಅದು ಹಿಂದಿನ ಕಾಲದ ಪ್ರವಾಸದ ಉಗ್ರತೆಯನ್ನು ತಗ್ಗಿಸುತ್ತಿತ್ತು.

"ಹಿಂದೂ ಯಾತ್ರಾಸ್ಥಳಗಳ ಈ ವ್ಯವಸ್ಥೆಯ ಜೊತೆಗೆ ಭೌದ್ಧ ಮತ್ತು ಜೈನ ಮತಗಳ ಸ್ಮಾರಕಗಳನ್ನೂ ಪರಿಗಣಿಸಬೇಕು; ಅವು ಈ ನಾಡನ್ನು ಅಲಂಕರಿಸಿ ತಮ್ಮ ನೇರವಾದ ಪ್ರಭಾವದಲ್ಲಿದ್ದ ಬಹುಪಾಲು ಜನತೆಯ ಭೌಗೋಳಿಕ ಪ್ರಜ್ಞೆಯ ಮೇಲೆ ಪರಿಣಾಮ ಬೀರಿವೆ. ಹಿಂದೂಗಳ ಮನಸ್ಸಿಗೆ ಯಾತ್ರೆಯ ಭಾವನೆ ಹೇಗೊ ಜೈನ, ಬೌದ್ಧರಿಗೆ ಅವಶೇಷಗಳ ಪೂಜೆ ಹಾಗೆ. ಮೊದಲನೆಯದು ಪುಣ್ಯಕ್ಷೇತ್ರಗಳ ಸ್ಥಾಪನೆಯಲ್ಲಿ, ಎರಡನೆಯದು ದೇಶವನ್ನು ಸುಂದರಗೊಳಿಸುವ ಸ್ಮಾರಕಗಳ ನಿರ್ಮಾಣದಲ್ಲಿ ತಮ್ಮನ್ನು ತಾವು ಸಾಕ್ಷಾತ್ಕರಿಸಿಕೊಂಡವು......... ನಾಡಿನ ಉದ್ದಗಲಕ್ಕೂ ದೂರ ದೂರದಲ್ಲಿ ನೆಲೆಗೊಂಡಿರುವ ಬೌದ್ಧ ಮತ್ತು ಜೈನ ಸ್ಮಾರಕಗಳು ಸರ್ವಸಾಮಾನ್ಯವಾದ ಒಂದು ಕಲಾಪ್ರೇರಣೆಯ, ಧಾರ್ಮಿಕ ಭಾವನೆಯ ಸೂತ್ರದಿಂದ ಬದ್ಧವಾಗಿದೆ."

ಹೀಗೆ ಯಾತ್ರಾಪದ್ಧತಿ ದೇಶ ಪೂಜೆಯ ಒಂದು ವಿಶಿಷ್ಟ ವಿಧಾನವಾಗಿ, ಸಾರ್ವತ್ರಿಕವಾದ ಒಂದು ಮಾನವಭಾವದ ಹಿಂದೂ ಅಭಿವ್ಯಕ್ತಿಯಾಗಿ ಕಂಡು ಬರುವುದು ಮಾತ್ರವಲ್ಲದೆ ಉಳಿದ ವಿಷಯಗಳಲ್ಲಿ ಕೂಡ ಮಹೋನ್ನತವಾದ ಸಾಂಸ್ಕೃತಿಕ ಮೌಲ್ಯವನ್ನು ಪಡೆದಿದೆ. ಜನತಾ ಶಿಕ್ಷಣದ ಮತ್ತು ರಾಜಕೀಯ ಪ್ರಗತಿಯ ಅತ್ಯಂತ ದಕ್ಷಸಾಧನಗಳಲ್ಲಿ ಅದೊಂದು; ಅನಕ್ಷರಸ್ಥರಾದ ಭಾರತದ ಲಕ್ಷಾಂತರ ಜನರ ಮನಸ್ಸು ಸಹಜವಾದ ಒಂದು ಪ್ರಾಂತೀಯ ಪಕ್ಷಪಾತ ದೃಷ್ಟಿಯಿಂದ ಬಿಡುಗಡೆಗೊಳ್ಳಲು ಅದು ನೆರವಾಗುತ್ತದೆ. ಎಲ್ಲ ರಾಜಕೀಯ ಪ್ರಗತಿಯ ಅಡಿಗಲ್ಲಾದ ಭೌಗೋಳಿಕ ಪ್ರಜ್ಞೆಯನ್ನು ಅದು ವಿಸ್ತರಿಸುತ್ತದೆ; ತಮ್ಮ ನಿಜವಾದ ಮನೆಯ, ತಾವು ಪ್ರೀತಿಸಬೇಕಾದ ಮತ್ತು ಸೇವಿಸಬೇಕಾದ ಒಂದು ಸರ್ವಸಾಮಾನ್ಯ ರಾಷ್ಟ್ರದ ಅಸ್ತಿತ್ವದ, ತಮ್ಮ ಪೂಜೆಗೆ ಅರ್ಹವಾದ ಮಾತೃಭೂಮಿಯ ಭೌತಿಕ ದೇಹದ ಸಾಕ್ಷಾತ್ಕಾರವನ್ನು ಜನ ಪಡೆದುಕೊಳ್ಳಲು ಅದು ಸಹಾಯಮಾಡುತ್ತದೆ.

(ದಿ॥ ರಾಧಾಕುಮುದ ಮುಖರ್ಜಿಯವರ "ನ್ಯಾಷನಲಿಸಂ ಇನ್ ಹಿಂದೂ ಕಲ್ಚರ್" ಎಂಬ ಗ್ರಂಥದ ಒಂದು ಅಧ್ಯಾಯದ ಭಾವಾನುವಾದ.

-ಅನುವಾದ - ಸಿ.ಪಿ.ಕೆ: ಸಾಭಾರ - ಪುಸ್ತಕ ಪ್ರಪಂಚ)

ಸತ್ಯಾಗ್ರಹದ ಮೀಮಾಂಸೆ

–ಸತ್ಯವ್ರತ

೨೦೦೬ ಸತ್ಯಾಗ್ರಹ ಶತಮಾನೋತ್ಸವ ವರ್ಷ. ಒಂದು ಶತಮಾನದ ಹಿಂದೆ, ಸೆಪ್ಟಂಬರ್ ೧೧ನೇ ದಿನಾಂಕ ಜೋಹಾನ್ಸ್‌ಬರ್ಗ್ ನಗರದ ಹಳೆಯ ಎಂಪೈರ್ ಚಿತ್ರಮಂದಿರದಲ್ಲಿ ಸೇರಿದ್ದ ಭಾರತೀಯ ನಿವಾಸಿಗಳು ದಕ್ಷಿಣ ಆಫ್ರಿಕಾದ ತಮ್ಮ ಹೋರಾಟಕ್ಕಾಗಿ ಪಣತೊಟ್ಟರು, ಪ್ರತಿಜ್ಞೆ ಸ್ವಿಕರಿಸಿದರು. ಗಾಂಧೀಜಿ ಇಂಡಿಯನ್ ಒಪೀನಿಯನ್ ಪತ್ರಿಕೆಯಲ್ಲಿ ತಮ್ಮ ಸಂಘರ್ಷದ ಅಂತರಾರ್ಥ ಮತ್ತು ನೀತಿ-ನಿಯಮಾವಳಿಗಳನ್ನು ಕುರಿತು ಸಾಕಷ್ಟು ದೀರ್ಘವಾಗಿ ಚರ್ಚಿಸಿದ್ದರು. ಇವೆಲ್ಲವನ್ನು ಒಳಗೊಳ್ಳುವ ಸೂಕ್ತ ಭಾರತೀಯ ಹೆಸರನ್ನು ಸೂಚಿಸಿದವರಿಗೆ ಒಂದು ಚಿಕ್ಕ ಬಹುಮಾನ ಕೊಡುವುದಾಗಿ ಪತ್ರಿಕೆಯಲ್ಲಿ ಪ್ರಕಟಿಸಿದರು. ಹಲವು ಹೆಸರು ಸೂಚಿತವಾದವು. ಮಗನ್‌ಲಾಲ್ ಗಾಂಧೀಯವರು ಸೂಚಿಸಿದ 'ಸದಾಗ್ರಹ' ಶಬ್ದ ತಮ್ಮ ಸಂಘರ್ಷದ ತತ್ವ ಸಿದ್ಧಾಂತ ಮತ್ತು ಆಚರಣೆಗಳನ್ನು ಸಂಕೇತಿಸುವ ಅತೀಸಮೀಪದ ಶಬ್ದವಾಗಿತ್ತು. ಗಾಂಧೀಯವರಿಗೆ ಆ ಪದ ಹಿಡಿಸಿತಾದರೂ, ಅದರಿಂದ ಪೂರ್ಣ ಸಮಾಧಾನವಾಗಲಿಲ್ಲ, ಅದು ಪೂರ್ಣ ವಿಚಾರವನ್ನು ಪ್ರತಿನಿಧಿಸಲಾರದು ಎನಿಸಿತು. ಆದ್ದರಿಂದ ಗಾಂಧೀಜಿ ಅದನ್ನು ಕೊಂಚ ಪರಿಷ್ಕರಿಸಿ 'ಸತ್ಯಾಗ್ರಹ' ಎಂದು ಕರೆದರು. ಅದು ಸತ್ಯ ಮತ್ತು ಅಹಿಂಸೆಗಳ ಸಂಯುಕ್ತ ಕ್ರಿಯೆಯಿಂದ ಹುಟ್ಟಿದ ಬಲ ಹಾಗೂ ಅದಕ್ಕಾಗಿ ತೊಟ್ಟ ಆಗ್ರಹ ಇವು ಒಟ್ಟುಗೂಡಿ ಸಾತ್ವಿಕ ಬಲವನ್ನು ಸೂಚಿಸುವ ಪರ್ಯಾಯವಾಚಿ ಪದವಾಯಿತು. ಅದನ್ನು ಇಂಗ್ಲಿಷ್ ಪದ 'ಪ್ಯಾಸಿವ್ ರೆಸಿಸ್ಟೆನ್ಸ್'ಗೆ ಬದಲಿ ನಾಮಾಂಕಿತವಾಗಿ ಬಳಸಲಾರಂಭಿಸಿದರು. ದಕ್ಷಿಣ ಆಫ್ರಿಕಾದ ಭಾರತೀಯರ ಹೋರಾಟಕ್ಕೊಂದು ನಾಮಕರಣವಾದದ್ದು ಹೀಗೆ,

ಸೆಪ್ಟಂಬರ್ ೧೧ ನೇ ದಿನಾಂಕ ಇನ್ನೂ ಎರಡು ದೃಷ್ಟಿಯಿಂದ ದೇಶಕ್ಕೂ ಜಗತ್ತಿಗೂ ಬಹು ಮಹತ್ವಪೂರ್ಣ. ೧೯೪೦ರ ವೈಯಕ್ತಿಕ ಸತ್ಯಾಗ್ರಹದ ಪ್ರಥಮ ಸತ್ಯಾಗ್ರಹಿಯನ್ನಾಗಿ ನೇಮಿಸಲ್ಪಟ್ಟ ವಿನೋಬಾಜಿಯ ಜನ್ಮದಿನವೂ ಅಂದೇ. ಅದು ವಿಶ್ವದಾದ್ಯಂತ ಭಯೋತ್ಪಾದಕ ವಿರೋಧಿ ದಿನವೂ ಸಹ. ಹೀಗೆ ಸೆಪ್ಟಂಬರ್ ೧೧ ಹಲವು ದೃಷ್ಟಿಯಿಂದ ಅವಿಸ್ಮರಣೀಯ ಪವಿತ್ರ ದಿನ.

ಇಂದು ಸತ್ಯಾಗ್ರಹ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಮತ್ತು ಜಾಗತಿಕ ಸ್ತರಗಳಲ್ಲಿ ಹಿಂಸಾಮಯ ಸಂಘರ್ಷಕ್ಕೆ ಮತ್ತು ಯುದ್ಧಗಳಿಗೆ ಪ್ರಭಾವಕಾರಿ ಮತ್ತು ಪರಿಣಾಮಕಾರಿ ಪರ್ಯಾಯ ಸಾಧನವಾಗಿ ಬೆಳೆದಿದೆ, ಬೆಳೆಯುತ್ತಲೂ ಇದೆ. ಯೌದ್ಧಿಕ ಸಭ್ಯತೆಯ ಅಗ್ರಣಿ ಸೇನಾಪತಿಗಳು ಅದೇ ಆಶಯ ಮತ್ತು ಆಶೆಯಿಂದ ಸತ್ಯಾಗ್ರಹವನ್ನು ಸ್ವೀಕರಿಸಿರುವುದೊಂದು ಜಗತ್ತಿಗೆ ಶುಭಸಂಕೇತವೇ ಸರಿ. ಒಂದು ಶತಮಾನದ ಅವಧಿಯಲ್ಲಿ

ಈ ಅಹಿಂಸಕ ಪರ್ಯಾಯ ಪದ್ಧತಿಯ ಹಲವಾರು ಬಳಕೆ ಮತ್ತು ಪ್ರಯೋಗಗಳಿಂದಾಗಿ ಸತ್ಯಾಗ್ರಹದ ಸುತ್ತ ಹೊಸ ಶಬ್ದಾವಳಿ, ಶಾಸ್ತ್ರ, ನೀತಿ–ನಿಯಮ, ಅದನ್ನು ಬಳಸುವವರು ಅರ್ಹತೆಗಳಿಸಲು ಅನುಸರಿಸಬೇಕಾದ ಅನುಷ್ಠಾನದ ರೂಪರೇಷೆ ಇತ್ಯಾದಿಯೆಲ್ಲವೂ ಬೆಳೆದು ನಿಂತಿವೆ. ಅವೆಲ್ಲ ಸೇರಿ ಸತ್ಯಾಗ್ರಹ ಧರ್ಮ ಎನಿಸಿವೆ. ಅದರ ಹಿಂದೆ ಇತಿಹಾಸವೇ ಬೆಳೆದು ನಿಂತಿದೆ. ಅವನ್ನೆಲ್ಲ ಪುನರವಲೋಕಿಸುವ, ಅಭ್ಯಸಿಸುವ, ಪುನಃಪ್ರಯೋಗಿಸುವ ಅವಶ್ಯಕತೆ ಹಿಂದೆಂದಿಗಿಂತ ಹೆಚ್ಚಾಗಿ, ಇಂದು ತಲೆದೋರಿದೆ.

ದೇಶದ ಸ್ವಾತಂತ್ರ ಪ್ರಾಪ್ತಿಗಾಗಿ ಗಾಂಧೀಜಿ ನಾಯಕತ್ವದಲ್ಲಿ ಸತ್ಯಾಗ್ರಹದ ವ್ಯಾಪಕ ಪ್ರಯೋಗಗಳಾದವು. ಆದರೆ ಗಾಂಧೀಜಿಯ ದೃಷ್ಟಿಯಲ್ಲಿ ಅವೆಲ್ಲ ದುರ್ಬಲರಿಂದಾದ ಅನ್ವಯ ಮತ್ತು ಅನುಷ್ಠಾನವಾಗಿದ್ದವು. ಅಂಥ ದುರ್ಬಲರ ಅಹಿಂಸೆ ಸಹ ಅಗಾಧ ಫಲ ಕೊಟ್ಟಿತು. ಅದು ಪ್ರಬಲರ ಅಹಿಂಸೆಯಾಗಿದ್ದಿದ್ದರೆ, ಅನಂತ ಸತ್ಫಲ ಕೊಡುವಂಥದಿತ್ತು. ಆ ದಿಶೆಯಲ್ಲಿ ಹೊಸ–ಹೊಸ ಪ್ರಯೋಗ ಆಗಬೇಕಾದ ಸಮಯ ಸನ್ನಿಹಿತವಾಗಿದೆ. ಮುಂಬರುವ ಗಾಂಧಿಯಂಥ ಹೊಸ ಪ್ರಯೋಗವೀರರಿಗೆ ಮೈದಾನವೀಗ ಹಸನಾಗಿದೆ.

ಮೂರನೆಯದಾಗಿ, ಸಾಮಾನ್ಯ ಜನತೆಯಲ್ಲಿ ಸತ್ಯಾಗ್ರಹಿ ಧರ್ಮದ ಅರ್ಥಾತ್ ಅಹಿಂಸಕ ಪ್ರತಿರೋಧ ಶಕ್ತಿಯನ್ನು ನೆಲೆಗೊಳಿಸುವುದೊಂದೇ ಸ್ವಾತಂತ್ರ್ಯದ ಉಳಿವಿಗೆ, ಪ್ರಜಾತಂತ್ರದ ರಕ್ಷಣೆಗೆ, ಮತ್ತು ಜನಜೀವನದಲ್ಲಿ ಶುದ್ಧ ವ್ಯವಹಾರಕ್ಕೆ ನಮ್ಮ ಕೈಯೊಳಗಿರುವ ಏಕೈಕ ಅಮೋಘ ಹಾಗೂ ನೇರ ಉಪಾಯ. ಸತ್ಯಾಗ್ರಹದ ಪ್ರಸ್ತುತತೆ ಅತಿ ಹೆಚ್ಚಾಗಿ ತೋರಿಬರಬೇಕಾದ್ದು ಇಲ್ಲಿಯೇ. ಅಷ್ಟೇಕೆ, ಅದು ಅಂತರಾಷ್ಟ್ರೀಯ ರಂಗಕ್ಕೂ ಹಬ್ಬಬೇಕಾದ ಅಗತ್ಯವೂ ಅಷ್ಟೇ ಹೆಚ್ಚಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಇತಿಹಾಸ ಸೃಷ್ಟಿಸಿದ, ಸೋಲುಗಾಣದ ಈ ಅಹಿಂಸಕ ಅಸ್ತ್ರಪ್ರಯೋಗದ ನೀತಿ–ನಿಯಮಾವಳಿಯನ್ನು ಪುನಃ ಸ್ಮರಿಸಿಕೊಂಡು ಭಾರತದ ಇಂದಿನ ಪರಿಸ್ಥಿಗೆ ಅನ್ವಯಿಸುವ ಸಾಹಸೀಕಾರ್ಯಕ್ಕೆ ಪ್ರವೃತ್ತರಾಗುವ ಸಂಕಲ್ಪ ಸ್ವೀಕಾರಕ್ಕೆ ಸಜ್ಜಾಗ ಬೇಕಾಗಿದೆ. ಇನ್ನು ಸತ್ಯಾಗ್ರಹದ ನೀತಿ–ನಿಯಮಾವಳಿಯನ್ನು ನೋಡೋಣ.

೧. ಸತ್ಯ ಮತ್ತು ಅಹಿಂಸೆಗಳೆರಡನ್ನೂ ಕಾಯಾವಾಚ–ಮನಸಾ ಪರಿಪಾಲಿಸುತ್ತಾ ಹೂಡಲಾದ ಸತ್ಯಾಗ್ರಹಕ್ಕೆ ಸೋಲೆಂಬುದಿಲ್ಲ.

೨. ಅಸತ್ಯದ ಮೇಲೆ ಸತ್ಯದ ವಿಜಯವನ್ನು ಸಾಧಿಸಲು ಒಬ್ಬ ಪರಿಪೂರ್ಣ ಸತ್ಯಾಗ್ರಾಹಿ ಇದ್ದರೂ ಸಾಕು.

೩. ಸತ್ಯಾಗ್ರಹದ ಉತ್ಕಟತಮ ಹಂತ ಆತ್ಮತ್ಯಾಗ, ಅತ್ಯಧಿಕ ವಿನಯ, ಅಷ್ಟೇ ಅಗಾಧ ಸಹನಶೀಲತೆ–ತಾಳ್ಮೆ ಮತ್ತು ಗಾಢ ನಂಬಿಕೆ ಇರಬೇಕು.

೪. ಸತ್ಯಾಗ್ರಹದ ಪ್ರತಿಫಲ ಸತ್ಯಾಗ್ರಹವೇ.

೫. ಸತ್ಯಾಗ್ರಹವೆಂದರೆ ಸತ್ಯದ ಅವಿರತ ಶೋಧನೆ ಮತ್ತು ಸತ್ಯವನ್ನರಸುವ ಮನೋನಿಶ್ಚಯ. ಆದುದರಿಂದ ಸತ್ಯಾಗ್ರಹಿ ಮೊದಲು ಸತ್ಯಾಗ್ರಹಿಯಾಗಿರಬೇಕು.

೬. ಸತ್ಯಾಗ್ರಹ ಒಂದು ಅಂತರ್ನಿಹಿತ ಶಕ್ತಿ. ಅದು ಮೌನವಾಗಿ ಎದುರಾಳಿಯ ಹೃದಯ

ಕ್ಷೇತ್ರದಲ್ಲಿ ತನ್ನ ಕಾರ್ಯ ಮಾಡುತ್ತದೆ ಮತ್ತು ಮೇಲ್ತೋರಿಕೆಗೆ ಸಾವಕಾಶವಾಗಿ ಕಾರ್ಯ ಮಾಡುತ್ತದೆ.

೭. ಸತ್ಯಾಗ್ರಹ ಸಭ್ಯ ಪ್ರಜೆಯೊಬ್ಬನ ಆಜನ್ಮ ಸಿದ್ಧ ಹಕ್ಕು.

೮. ಸತ್ಯಾಗ್ರಹ ಆರಂಭವಾಯಿತೆಂದರೆ ಅದು ಉತ್ಕಟ ಅಥವಾ ತೀವ್ರವಾಗಿದ್ದ ಪಕ್ಷದಲ್ಲಿ ಪರಿಣಾಮ ಇಡೀ ವಿಶ್ವವನ್ನೇ ಹಿಂದೆಹಾಕಿಬಿಡಬಹುದು. ಅದು ಮಹತ್ತಮ ಅಸ್ತ್ರ. ಏಕೆಂದರೆ ಯಾರೊಬ್ಬನೂ ಇರಲಾರನೆಂಬ ನಂಬಿಕೆಯೇ ಅಹಂಸೆಯ ಭದ್ರ ಬುನಾದಿ.

೯. ಸತ್ಯಾಗ್ರಹಿ ಸಂಘರ್ಷಕ್ಕೆ ಸಿದ್ಧ. ಆದರೆ ಶಾಂತಿಗೆ, ಸಮಾಧಾನಕ್ಕೆ ಸಂಧಾನಕ್ಕೆ ಅಷ್ಟೇ ಉತ್ಸುಕನಾಗಿರುತ್ತಾನೆ. ಶಾಂತಿಯ ಪುನಃಸ್ಥಾಪನೆಗಾಗಿ ಯಾವುದೇ ಗೌರವ ಪೂರ್ಣ ಸಮ್ಮಾನಯುಕ್ತ ಅವಕಾಶವನ್ನು ಆತ ಸ್ವಾಗತಿಸಬೇಕು. ಎಂದರೆ ಸತ್ಯಾಗ್ರಹಿಯಾದವನು ಒಮ್ಮತಕ್ಕೂ, ಒಪ್ಪಂದಕ್ಕೂ ಇರುವ ಅಥವಾ ಬರಲಿರುವ ಅವಕಾಶವನ್ನು ಕಳೆದುಕೊಳ್ಳವುದಿಲ್ಲ.

೧೦. ಸತ್ಯಾಗ್ರಹ ಸೌಮ್ಯವಾದುದು. ಅದು ಘಾಸಿಯನ್ನುಂಟುಮಾಡದು. ಅದು ಕೋಪ ಅಥವಾ ದ್ವೇಷಜನ್ಯವಾಗಿ ಬರುವುದಿಲ್ಲ, ಎಂದಿಗೂ ಗೋಣಗುವುದಿಲ್ಲ. ಅದು ಒತ್ತಡ ಹೇರದು. ಒತ್ತಾಯ ಒತ್ತಡಕ್ಕೆ ಸರಿ ವಿರೋದಿ.

೧೧. ಹಿಂಸೆಗೆ ಪೂರ್ಣತಃ ಪರ್ಯಾಯ ರೂಪದಲ್ಲಿ ಸತ್ಯಾಗ್ರಹ ವಿಕಸಿಸಲ್ಪಟ್ಟಿದೆ. ಹಿಂಸೆಯನ್ನು ಹಿಂಸೆಯಿಂದ ಅಡಗಿಸಲು ಸಾಧ್ಯವಿಲ್ಲ. ಒಂದು ಹಿಂಸೆ ಮತ್ತೊಂದು ಹಿಂಸೆಯನ್ನು ಪ್ರಚೋದಿಸುತ್ತದೆ.

೧೨. ಸತ್ಯಾಗ್ರಹಿ ರಾಜ್ಯ ಸಂಸ್ಥೆಯ, ಕಾನೂನಿನ ವಿಧ್ವಂಸಕನಲ್ಲ. ರಾಜ್ಯ ಮತ್ತು ಕಾನೂನುಗಳೆರಡೂ ಒಂದೆ ನಾಣ್ಯದ ಎರಡು ಬದಿಗಳು ಎಂದು ತಿಳಿಯುತ್ತಾನೆ.

೧೩. ಸ್ವಾತಂತ್ರ್ಯದಲ್ಲಿ ಮಾತ್ರವೇ ಜವಾಬ್ದಾರಿ, ಹೊಣೆಗಾರಿಕೆ ಇರುವುದು. ಅದು ಇಲ್ಲದಲ್ಲಿ ಹೊಣೆಗಾರಿಕೆಯ ಪ್ರಶ್ನೆ ಏಳದು ಎಂದು ಸತ್ಯಾಗ್ರಹಿ ತಿಳಿದಿದ್ದಾನೆ.

೧೪. ಸತ್ಯಾಗ್ರಹವೆನ್ನುವುದು ಸ್ವತಂತ್ರನೂ, ಅಂತಃಸ್ಸಾಕ್ಷಿಗನುಗುಣವಾಗಿ ನಡೆಯುವವನೂ ಆದ ಜಾಗೃತನಾಗರೀಕ ಮತ್ತು ರಾಜ್ಯದ ನಡುವಣ ಸಂಘರ್ಷ. ಇವೆರಡರ ನಡುವಣ ಅಂತರ್ವಿರೋಧವನ್ನು ನ್ಯಾಯಾಲಯಗಳು ತೀರ್ಪಿತ್ತು ವಿಧಿಸುವ ಯಾವುದೇ ದಂಡ ಅಥವಾ ಶಿಕ್ಷೆಯನ್ನು ಸಹರ್ಷ ಸ್ವೀಕರಿಸಿ ಅನುಭವಿಸುವುದರ ಮೂಲಕ ಪರಿಹರಿಸುವನು. ಹೀಗೆ ನಡೆದುಕೊಂಡ ಆತ ರಾಜ್ಯಕ್ಕಾಗಲೀ ಕಾನೂನು ವ್ಯವಸ್ಥೆಗಾಗಲೀ ಹಾನಿಯುಂಟು ಮಾಡುವುದಿಲ್ಲ.

೧೫. ಮಹೋನ್ನತ ಆದರ್ಶದಿಂದ ಪ್ರೇರಿತ, ಮಹೋನ್ನತ ನಿಯಮಗಳನ್ನು ಪರಿಪಾಲಿಸುವ ಸತ್ಯಾಗ್ರಹ ಲೌಕಿಕ ಕಾನೂನಿನ ಅಗತ್ಯಗಳನ್ನು ಪರಿಪಾಲಿಸಿದಂತೆಯೇ ಆಗುತ್ತದೆ, ಆದ್ದರಿಂದ ಅವನು ಐಹಿಕ ನಿಯಮಗಳನ್ನು ನಾಶಗೊಳಿಸುವುದಿಲ್ಲ.

೧೬. ಸತ್ಯಾಗ್ರಹ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧವಲ್ಲ ; ಅದು ನಡೆಯುವುದು ಮತ್ತು ನಡೆಯಬೇಕಾದ್ದು ದೌಷ್ಟ್ಯ, ಕ್ರೌರ್ಯ, ಅನ್ಯಾಯ, ಅನೀತಿ, ದುರಾಚಾರ, ದುಷ್ಟ ಶಾಸನ ಮುಂತಾದವುಗಳ ವಿರುದ್ಧ.

ಕಿಂಚಿತ್ ಪಶ್ಯೇಯುಃ ಸಕಲ–ನಿಗಮ ನೀರ್ಣೀತಾತ್ – ಅಂದರೆ ಜ್ಞಾನಿಗಳು ಸಂಸಾರವನ್ನು ನೋಡುವುದಕ್ಕೆ ಒಲ್ಲೆ ಎನ್ನುವುದಿಲ್ಲ. ಸಂಸಾರವನ್ನು ನೋಡುತ್ತಿದ್ದರೂ ಎಲ್ಲ ನಿಗಮ ಮತ್ತು ವೇದಗಳು ನಿರ್ಣಯ ಮಾಡಿದುದಂಥದಕ್ಕೆ ವ್ಯತಿರಿಕ್ತವಾದ ಆತ್ಮವನ್ನು ನೋಡುವುದಿಲ್ಲ. ಇದು ಜ್ಞಾನಿಗಳ ವಿಶೇಷತೆ. ಎಲ್ಲ ಪ್ರಕಾರದ ಸಂಸಾರವನ್ನು, ಪ್ರಪಂಚವನ್ನು ನೋಡುತ್ತಿದ್ದಾಗಲೂ ಆತ್ಮಕ್ಕೆ ಭಿನ್ನವಾದುದಂಥದನ್ನು ಯಾವುದನ್ನೂ ನೋಡುವುದಿಲ್ಲ.

ಇದರಲ್ಲಿ ಶ್ರದ್ಧೆಯ ಮಾತು ಇದೆ. ವೇದಗಳ ನಿರ್ಣಯ ಸರಿ ಎಂದು ಹೇಳಲಾಗಿದೆ. ನಮಗೆ ವೇದವಲ್ಲದೆ ಹೊಸ ವಿಷಯ ಯಾವುದು ಗೊತ್ತಿದೆ? ಆದ್ದರಿಂದ ವೇದಗಳ ಶಬ್ದ ಒಪ್ಪಿಕೊಂಡು ನಾವು ನಡೆಯುತ್ತೇವೆ. ಮಗುವಿಗೆ ಚಂದ್ರ ಗೊತ್ತಿಲ್ಲ. ತಾಯಿ ಚಂದ್ರವೆಂದು ಹೇಳುತ್ತಾಳೆ ಆದ್ದರಿಂದ ಮಗು ತಾಯಿಯ ಮಾತಿನ ಮೇಲೆ ಶ್ರದ್ಧೆಯನ್ನಿಡುತ್ತದೆ. ಅದೇ ರೀತಿ ವೇದಗಳ ಮೇಲೆ ಜ್ಞಾನಿ ಪುರುಷರ ಶ್ರದ್ಧೆ ಇರುತ್ತದೆ. ಮೊದಲು ಶ್ರದ್ಧಾಯುಕ್ತರಾಗಿ ವ್ಯವಹಾರ ಮಾಡಬೇಕು, ನಂತರ ಸಾಕ್ಷಾತ್ಕಾರದಿಂದ ನಿಷ್ಠೆ ಉಂಟಾಗುತ್ತದೆ. ಆರಂಭದಲ್ಲಿ ಶ್ರದ್ಧೆ, ಅಂತ್ಯದಲ್ಲಿ ನಿಷ್ಠೆ. ಆದರೆ ಸಾಕ್ಷಾತ್ ಅನುಭವವಾಗುವವರೆಗೆ ವಿಷಯವನ್ನು ಮಾತ್ರ ಶ್ರದ್ಧೆಯಿಂದ ಒಪ್ಪಬೇಕು.

ವೇದದ ಮೇಲೆ ಇರುವ ಶ್ರದ್ಧೆ ಜಡವಲ್ಲ. ನೀವು ವೇದದ ವಿಷಯವಾಗಿ ಶ್ರದ್ಧೆಯಿಡಬೇಕೆ, ಇಡಬಾರದೆ ಎಂಬ ಬಗ್ಗೆ ನಿಮಗೆ ಯಾವುದೇ ಆಯ್ಕೆಯಿಲ್ಲ. ವೇದ ಕೇವಲ ಪ್ರಾಚೀನ ಗ್ರಂಥವಷ್ಟೇ ಅಲ್ಲ ಶಬ್ದವೂ ಆಗಿದೆ. ನಾವು ಉಪಯೋಗಿಸುವ ಶಬ್ದಗಳೆಲ್ಲವೂ ಪ್ರಾಚೀನವಾಗಿವೆ. ವೇದ ಕೊಟ್ಟಿರುವಂಥ ಶಬ್ದಗಳನ್ನೇ, ಭಾಷೆಯನ್ನೇ ಇಂದೂ ಉಪಯೋಗಿಸುತ್ತಿದ್ದೇವೆ. ಪದಾರ್ಥವಾಚಕವೂ, ವಸ್ತುವಾಚಕವೂ ಆದ ಶಬ್ದಗಳಿರುತ್ತವೆ. ಅವು ಹೊಸದಾಗಿರುತ್ತವೆ. ಉದಾಹರಣೆಗೆ ಮೋಟಾರ್, ಪೆನ್ಸಿಲ್ ಇತ್ಯಾದಿ. ಉಳಿದವೆಲ್ಲ ಭಾವವಾಚಕ ಶಬ್ದಗಳು. ಚಿತ್ತ, ಮನ, ಬುದ್ಧಿ, ಅಹಂಕಾರ ಇತ್ಯಾದಿ ಶಬ್ದಗಳೆಲ್ಲ ಪ್ರಾಚೀನ ಶಬ್ದಗಳೆ. ಹೊಸ ಶಬ್ದ ರಚಿಸಿದಾಗ ನಾವು ಮಾಡಿದ್ದೇನು? ಎರಡು ಹಳೆಯ ಶಬ್ದಗಳ ಸಮಾಸ ಮಾಡಿದೆವು, ಸತ್ಯ + ಆಗ್ರಹ = ಸತ್ಯಾಗ್ರಹ.

ಯಾವುದೇ ಶಬ್ದ ರಚಿತವಾಗಲಿ, ಅದು ವೇದವೇ. ವೇದ ಅಂದರೇನೇ ಶಬ್ದದ ರಚನೆ. ಆಶ್ಚರ್ಯದ ವಿಷಯವೇನೆಂದರೆ ನಾವು ಒಂದೇ ಒಂದು ಹೊಸ ಶಬ್ದವನ್ನು ರಚಿಸಲಾರೆವು. ನೀವು ಮೌಲ್ಯಾಧಾರಿತ ಚಿಂತನೆಯನ್ನೇನೋ

ಮಾಡಬಹುದು ಆದರೆ ಹಳೆ ಶಬ್ದಗಳನ್ನು ಉಪಯೋಗಿಸದೆ ಚಿಂತನೆ ಮಾಡಿ ಎಂದು ನಿಮಗೆ ಹೇಳಿದರೆ ನೀವು ಮೌನವಾಗಿಯೇ ಇರಬೇಕಾಗಬಹುದು. ಚಿಂತನವೇ ನಡೆಯಲಾರದು. ನಾವು ಮಾತನಾಡುತ್ತಾ ಯೋಚಿಸುತ್ತಾ ಇರುವವರೆಗೂ ಹಳೆಯ ಶಬ್ದಗಳ ಉಪಯೋಗವೇ ಆಗುತ್ತದೆ. ಬೈಬಲ್ಲಿನಲ್ಲಿ ಕೂಡ 'ಇನ್ ದಿ ಬಿಗಿನಿಂಗ್ ವಾಸ್ ದಿ ವರ್ಡ್' – ವಿಶ್ವದ ಆರಂಭದಲ್ಲಿ ಶಬ್ದವಿತ್ತು ಎಂದು ಹೇಳಿದೆ. ಶಬ್ದವೇ ಆದ್ಯ. ಆದ್ದರಿಂದ ಶಬ್ದದ ಆಧಾರ ತೆಗೆದುಕೊಳ್ಳವುದು ನಮಗೆ ಅತ್ಯಂತ ಸ್ವಾಭಾವಿಕ. ಹೀಗೆ ನಮ್ಮ ಮೇಲೆ ಪೂರ್ವಗ್ರಂಥಗಳ ಋಣವಿದೆ. ಇದನ್ನರಿಯದೆ ಪೂರ್ವಗ್ರಂಥಗಳು ಭಾರವೆಂದು ತಿಳಿಯುವುದಾದರೆ ಏನಾಗುವುದು? ಯೂಕ್ಲಿಡ್‌ನ ಜ್ಯಾಮಿತಿಯಿದೆ. ಆ ಜ್ಯಾಮಿತಿಯನ್ನು ಓದದೆ ಜ್ಯಾಮಿತಿಯ ಶೋಧನೆಯಲ್ಲಿ ತೊಡಗಿದರೆ ನೀವು ಹೊಸ ಶೋಧನೆಯನ್ನು ಮಾಡಬಲ್ಲಿರಾ? ಜ್ಯಾಮಿತಿಯ ಒಂದು ಸಿದ್ಧಾಂತವಿದೆ, 'ತ್ರಿಕೋನದ ಮೂರು ಕೋನಗಳ ಮೊತ್ತ ಎರಡು ಲಂಬಕೋನಗಳಿಗೆ ಸಮ'. ಈ ಸಿದ್ಧಾಂತವನ್ನು ತಿಳಿದಾದ ನಂತರವೇ ಮುಂದಿನ ಹೊಸ ಸಿದ್ಧಾಂತವನ್ನು ಕಂಡುಹಿಡಿಯಬಹುದು. ಇದು ಯೂಕ್ಲಿಡ್‌ನ ಋಣ. ಹಾಗೆಯೇ ವೇದವನ್ನು ಓದಿ, ಅದನ್ನು ತಿಳಿದಾದ ನಂತರ ನಿರ್ವೇದ.

ನಮ್ಮ ಜೀವನದಲ್ಲಿರುವ ಅಂತಹ ಸೃಷ್ಟಿ ಶಬ್ದಗಳದ್ದಾಗಿದೆ. ಶಬ್ದಗಳು ನಮ್ಮ ರತ್ನ. ಶಬ್ದಗಳೇ ನಮ್ಮ ಶಾಸ್ತ್ರ. ಇವುಗಳಿಗಿಂತ ದೊಡ್ಡದಾದ ಬೇರೆ ಯಾವ ರತ್ನವಾಗಲೀ, ಶಾಸ್ತ್ರವಾಗಲೀ ಇರಲು ಸಾಧ್ಯವಿಲ್ಲ. ಪ್ರಾಚೀನಕಾಲದಿಂದ ಇಂದಿನವರೆಗೆ ಶಬ್ದಗಳ ಅಖಂಡ ಧಾರೆಯೊಂದು ಹರಿದು ಬಂದಿದೆ. ಅದು ಬಹಳ ಮನೋರಮ ಸೃಷ್ಟಿ. ನಮ್ಮ ಎಲ್ಲ ಭಾಷೆಗಳಲ್ಲಿ ಆ ಶಬ್ದಗಳು ಸಹಜವಾಗಿ ಸೇರಿಕೊಂಡಿವೆ. ನಾನು ಹಿಂದೂಸ್ತಾನ ಮತ್ತು ವಿದೇಶದ ಅನೇಕ ಭಾಷೆಗಳ ಅಧ್ಯಯನ ಮಾಡಿದ್ದೇನೆ. ೧೦,೦೦೦ ವರ್ಷಗಳಷ್ಟು ಹಳೆಯದಾದ ಭಾಷೆ ಸಂಸ್ಕೃತವಲ್ಲದೆ ಬೇರೊಂದು ಇಲ್ಲವೆಂದು ಹೇಳಬಲ್ಲೆ. ಸಂಸ್ಕೃತದ ಪ್ರಾಚೀನತಮ ಗ್ರಂಥ ಋಗ್ವೇದ. ಅದರ ಮೊದಲ ಮಂತ್ರದಲ್ಲಿ ಯಾವ ಶಬ್ದಗಳಿವೆಯೋ ಅವು ಯಾವ ಬದಲಾವಣೆಯಿಲ್ಲದೆ ಇಂದಿಗೂ ಹಿಂದಿ, ಮರಾಠಿ, ಬಂಗಾಲಿ, ಗುಜರಾತಿ ಇತ್ಯಾದಿ ಭಾಷೆಗಳಲ್ಲಿ ಉಪಯೋಗವಾಗುತ್ತಿದೆ. ಮೊದಲನೆ ಮಂತ್ರವೇ – **ಅಗ್ನಿಮೀಳೆ ಪುರೋಹಿತಮ್ ಯಜ್ಞಸ್ಯ ದೇವಂ ಋತ್ವಿಜಂ ಹೊತಾರಂ ರತ್ನಧಾತಮಮ್** (೧.೧.೧) – ಅಗ್ನಿ, ಪುರೋಹಿತ, ದೇವ, ಯಜ್ಞ, ಈ ಮುಂತಾದ ಶಬ್ದಗಳು ಹೇಗಿದ್ದವೋ ಹಾಗೆಯೇ ಆ ಭಾಷೆಗಳಲ್ಲಿ ರೂಢಿಯಲ್ಲಿವೆ. ಆದರೆ ಗ್ರೀಕ್ ಮತ್ತು ಲ್ಯಾಟಿನ್‌ನ ಭಾಷೆಗಳಲ್ಲಿರುವ

ಮೂಲಶಬ್ದಗಳು ಅವು ಇರುವಂತೆಯೇ ಈಗಲೂ ಉಪಯೋಗವಾಗುತ್ತಿರುವ ಯಾವ ಭಾಷೆಯೂ ಇಲ್ಲ. ಆದರೆ ಹಿಂದೂಸ್ತಾನದ ಭಾಷೆಗಳಲ್ಲಿ ಅಂದಾಜು ೫೦ ಪ್ರತಿಶತ ಶಬ್ದಗಳು ಋಗ್ವೇದದ ಕಾಲದಲ್ಲಿ ಹೇಗಿದ್ದವೋ ಅದೇ ರೀತಿಯಲ್ಲಿ ರೂಢಿಯಲ್ಲಿವೆ. ಇದೆಲ್ಲ ಹೇಗೆ ಸಂಭವಿಸಿತು? ಇದರ ಹಿಂದೆ ಅಹಿಂಸೆಯ ಪ್ರಕ್ರಿಯೆ ಇದೆ. ಹಳೆಯ ಶಬ್ದಗಳಿಗೆ ಹೊಸ ಅರ್ಥ ಕೊಡುತ್ತಾ ಹೋಗುವುದು ಅಹಿಂಸಕ ಕ್ರಾಂತಿಯ ವಿಚಾರ. ಯಾವುದೇ ಕ್ರಾಂತಿ ಶಬ್ದವಿಲ್ಲದೆ ಆಗುವುದಿಲ್ಲ. ಹಳೆಯ ಶಬ್ದಗಳನ್ನು ಬಿಡದೆ ಸ್ಥಿರವಾಗಿರಿಸಿಕೊಂಡು ಅವುಗಳಲ್ಲಿ ಹೊಸ ಅರ್ಥವನ್ನು ತುಂಬುತ್ತಾ ಹೋಗುವಂಥ ಪ್ರಕ್ರಿಯೆ ಬೇರೆ ದೇಶಗಳಲ್ಲಿ ನಡೆದಿಲ್ಲ. ಅಲ್ಲಿ ಹಳೆಯ ಶಬ್ದಗಳನ್ನು ಖಂಡಿಸುತ್ತಾರೆ, ಅವುಗಳನ್ನು ಮುರಿಯುತ್ತಾರೆ. ಆದರೆ ಹಿಂದೂಸ್ತಾನದಲ್ಲಿ ಆದಂಥ ವಿಚಾರ ಕ್ರಾಂತಿಗಳಿಗೆ ತಮ್ಮದೇ ಆದ ಒಂದು ಸ್ವತಂತ್ರ ಪ್ರಕ್ರಿಯೆ ಇತ್ತು. ಆ ಪ್ರಕ್ರಿಯೆ ಏನೆಂದರೆ ಹಳೆ ಶಬ್ದ ಉಳಿಸಿಕೊಳ್ಳುತ್ತಾ ಹೊಸ ಅರ್ಥ ತುಂಬುವುದು. ಅಂದರೆ ಆ ಶಬ್ದಗಳ ಹೊಸ ಹೊಸ ಅರ್ಥ ಮಾಡುತ್ತಾ ಹೋಗುವುದು. ಹಳೆಯ ಶಬ್ದದ ಶಕ್ತಿ, ಹೊಸ ಶಬ್ದದ ಅರ್ಥಮಧುರತೆ ಎರಡೂ ಸೇರಿ ಒಂದು ಹೊಸತಾದ ವಿಚಾರ ಹಿಂದೂಸ್ತಾನಕ್ಕೆ ದೊರೆಯುತ್ತಾ ಹೋಯಿತು. ಹಿಂದೂಸ್ತಾನದ ಇಡೀ ಶಬ್ದ ಸಂಗ್ರಹ ರಚನೆಯಾಯಿತು. ಇದರಿಂದಾಗಿ ನಮಗೆ ಬಹಳ ಶಕ್ತಿ ದೊರೆಯಿತು.

ಸಂಸ್ಕೃತ ಶಬ್ದಗಳು ಮಾತನಾಡುತ್ತವೆ. ಉದಾಹರಣೆಗೆ, ಹಸ್ತವೆಂದರೆ ನಗುವವನು. ನೀನು ಕೆಲಸ ಮಾಡಿದರೆ ನಗುತ್ತೀಯಾ. ಸೃಷ್ಟಿಯಲ್ಲಿರುವ ಹಾಸ್ಯ ಈ ಹಸ್ತದಲ್ಲಿ ನಿಗ್ರಹಿತವಾಗಿದೆ. ನಾವು ಕೆಲಸ ಮಾಡಿದರೆ ಜಗತ್ತು ನಗುತ್ತದೆ. ಲಕ್ಷ್ಮೀ ಹುಟ್ಟಿದರೆ ಇಡೀ ಸೃಷ್ಟಿ ನಗುತ್ತದೆ. ನದಿಯೆಂದರೆ ನಿನಾದ ಮಾಡುವಂಥದು. ಗಂಗಾ ಎಂದರೆ ಗಂ ಗಂ ಗಂ ಶಬ್ದ ಮಾಡುವಂಥದು. ಸರಿತಾ ಎಂದರೆ ಸರಸರ ಹರಿಯುವಂಥದು. ಹೀಗೆ ಮಾತನಾಡುವ ಶಬ್ದಗಳು ಹೊಸ ದೃಷ್ಟಿಯನ್ನು ಕೊಡುತ್ತವೆ. ಪೃಥ್ವಿಗೆ ಧರ ಎಂಬ ಇನ್ನೊಂದು ಹೆಸರಿಗೆ ಕಾರಣ ಅದು ಧಾರಣೆ ಮಾಡುತ್ತದೆಂಬುದಕ್ಕಾಗಿ. ಅದನ್ನು ಪೃಥ್ವಿಯೆಂದು ಯಾವಾಗ ಕರೆಯಲಾಗುತ್ತದೆ. ಯಾವಾಗ ಅದು ವಿಸ್ತಾರಗೊಳ್ಳುತ್ತದೊ ಆಗ. ಅದರ ಭಾರವು ಗಮನಕ್ಕೆ ಬಂದಾಗ ಅದನ್ನು ಗುರ್ವಿ ಎಂದು ಕರೆಯಲಾಗುವುದು. ಅಶ್ವ ಅಂದರೆ ಕುದುರೆ. ಈ ಅರ್ಥ ರೂಢಿಯಲ್ಲಿದೆ. ಆದರೆ ಪ್ರಾರಂಭದಲ್ಲಿ ಅದು ಹೀಗೆ ಇದ್ದಿರಲಾರದು. ವೇಗವಾಗಿ ಓಡುವ ಪ್ರಾಣಿಯನ್ನು ಮನುಷ್ಯ ನೋಡಿದಾಗ ಅದರ ಕ್ರಿಯೆಯ ಕಡೆಗೆ ಗಮನ ಹೋಗಿರಬೇಕು. ಆದ್ದರಿಂದ ಯಾರೊ "ಅಶ್ವಃ ಅಶ್ವಃ" ಅಂದರೆ

ವೇಗವಾಗಿ ಓಡುವಂಥದು ಎಂಬುದಾಗಿ ಅಂದಿರಬಹುದು. ಇನ್ನ್ಯಾರದೊ ಗಮನ ಕುದುರೆಯ ಅತಿ ತಿನ್ನುವಿಕೆಯ ಕಡೆಗೆ ಹೋಗಿರಬಹುದು ಆಗ ಅದನ್ನು ಗಮನಿಸಿ "ಅಶ್ ಅಶ್" ಅಂದರೆ ಬಹಳ ತಿನ್ನುವಂಥದು ಎಂದು ಅಂದಿರಬಹುದು. ಯಾವಾಗ ಅದರ ಸ್ಫೂರ್ತಿ ಮತ್ತು ಚಾಪಲ್ಯದಂಥ ಅದರ ಗುಣಗಳ ಕಡೆಗೆ ಗಮನ ಹೋಯಿತೊ ಆಗ ತಿನ್ನುವಂಥ ಎಂಬ ಅರ್ಥವನ್ನು ಬಿಡಬೇಕಾಯಿತು. ಶಬ್ದಗಳಿಗೆ ಅರ್ಥದ ಭಾರವಿರುವುದಿಲ್ಲ. ನಂತರ ರೂಢಿಗೆ ಬರುವ ಸಾಮಾನ್ಯ ಅರ್ಥ ಅದಕ್ಕೆ ದೊರೆಯುತ್ತದೆ. ವೈದಿಕ ಶಬ್ದಗಳ ಅರ್ಥ ಸೂಕ್ಷ್ಮ. ಮುಂದೆ ಅವುಗಳಿಂದ ಲೌಕಿಕ ಅರ್ಥ ಹೊರಟವು. ಸೂಕ್ಷ್ಮದಿಂದ ಸ್ಥೂಲ, ಅವ್ಯಕ್ತದಿಂದ ವ್ಯಕ್ತ. ಇದು ಸೃಷ್ಟಿಯ ನಿಯಮ. ಒಂದೊಂದು ಶಬ್ದದ ಕಡೆಗೆ ನೋಡುವ ಒಂದೊಂದು ದೃಷ್ಟಿಯಿದೆ. ಆದ್ದರಿಂದ ಪ್ರತಿಯೊಂದು ಶಬ್ದ ಶಕ್ತಿಯುತ ಪ್ರಾಣಯುತ ಆಗಿ ಪರಿಣಾಮಕಾರಿಯಾಗುತ್ತದೆ ಮತ್ತು ಮಾತನಾಡುತ್ತದೆ. ಹೀಗೆ ಮಾತನಾಡುವಂಥ ಶಬ್ದಗಳ ಭಾಷೆಯನ್ನು ನಾವು ತಿಳಿದುಕೊಂಡಿಲ್ಲವೆಂದರೆ ನಮ್ಮ ದೇಶದ ಸಾಮರ್ಥ್ಯವನ್ನು ನಾವು ಎಳ್ಳಷ್ಟೂ ತಿಳಿದಿಲ್ಲವೆಂದೆ ಅರ್ಥ.

ಅಲ್ಲಿ ವಿಚಾರದ ಒಂದು ಪ್ರಕ್ರಿಯೆ ಇತ್ತು. ಪ್ರಕ್ರಿಯೆಯನ್ನು ತಿಳಿಯದವರು ಶಬ್ದದ ಅರ್ಥವನ್ನೂ ತಿಳಿಯಲಾರರು, ಮತ್ತು ಆಳವನ್ನೂ ತಿಳಿಯಲಾರರು. ಮೇಲ್ಮೈ ಅರ್ಥವನ್ನು ಮಾತ್ರ ನೋಡಬಲ್ಲರು. ಆಗ ಇಲ್ಲಿಯ ಶಬ್ದಗಳನ್ನು ತುಂಡರಿಸುತ್ತಾರೆ.

ಯಾವ ವಸ್ತು ಯಾವ ಭೂಮಿಯಿಂದ ಹುಟ್ಟಿದಿಯೊ ಅದನ್ನು ತಿಳಿಯುವುದಕ್ಕಾಗಿ ಆ ಭೂಮಿಯೊಂದಿಗೆ ಹೃದಯ ಸಂಬಂಧವಿರಬೇಕು. ಹಾಗೆಯೇ ಯಾವ ಶಬ್ದ ಯಾವ ಗಾಳಿ ಮತ್ತು ಯಾವ ಭೂಮಿಯಿಂದ ರಚಿತವಾಗುತ್ತದೊ ಅದನ್ನು ತಿಳಿದುಕೊಳ್ಳಬೇಕು. ಈ ಶಬ್ದಗಳು ನನ್ನ ಬಳಿ ಇರುವವರೆಗೆ ಬಹಳ ಬಲ ದೊರೆಯುತ್ತದೆ. ಈ ಬಲವನ್ನು ಯಾರೂ ತುಂಡರಿಸಲಾರರು.

(ಸಶೇಷ)

ಗಾಂಧೀಜಿ ಮತ್ತು ಶಿಕ್ಷಣ ಮಾಧ್ಯಮ

– ಹ.ಕ. ರಾಜೇಗೌಡ

ನಮಗೆ ಇಂಗ್ಲಿಷು ಬೇಕೆ? ಬೇಕಾದರೆ ಎಷ್ಟುಬೇಕು? ಎಂಬುದನ್ನು ನಾವು ಮೊದಲು ತೀರ್ಮಾನಿಸಿಕೊಳ್ಳಬೇಕು. ಕೋಟಿಗಟ್ಟಲೆ ಜನರಿಗೆ ಇಂಗ್ಲಿಷ್‌ಕಲಿಸುವುದು ಅವರನ್ನು ಗುಲಾಮರನ್ನಾಗಿ ಮಾಡಿದಂತೆ. ಮೆಕಾಲೆ ಹಾಕಿದ ಶಿಕ್ಷಣದ ತಳಹದಿ ನಮ್ಮನ್ನು ಗುಲಾಮಗಿರಿಗೆ ನೂಕಿದೆ. ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕು. ಯೂರೋಪಿನಲ್ಲಿ ಕೈಬಿಟ್ಟ ಶಿಕ್ಷಣ ಪದ್ಧತಿಗಳು ನಮಗೆ ಶಿರೋಧಾರ್ಯ. ಇಂಗ್ಲಿಷ್ ಶಿಕ್ಷಣತಜ್ಞರು ಕಾಲಕ್ಕನುಗುಣವಾಗಿ ಶಿಕ್ಷಣ ಪದ್ಧತಿಯನ್ನು ಬದಲಿಸುತ್ತಾರೆ. ಅವರು ತಿರಸ್ಕರಿಸಿದ ಪದ್ಧತಿಯನ್ನು ನಾವು ತಬ್ಬಿಕೊಳ್ಳುತ್ತೇವೆ. ಪಾಶ್ಚಾತ್ಯ ದೇಶಗಳಲ್ಲಿ ಪ್ರತಿಯೊಂದು ಪ್ರದೇಶವೂ ಅಭಿವೃದ್ಧಿಯಾಗುವಂತೆ ಮಾಡುತ್ತಾರೆ. ವೇಲ್ಸಿನ ಮಕ್ಕಳಿಗೆ ತಮ್ಮ ತಾಯಿನುಡಿಯ ಮೂಲಕ ಶಿಕ್ಷಣ ಕೊಡಬೇಕೆಂದು ಚಳುವಳಿ ನಡೆಯಿತು. ಆರುನೂರು ವರ್ಷಗಳ ಗ್ರಹಣದ ನಂತರ ವೇಲ್ಸ್ ಭಾಷೆ ಮತ್ತೆ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತಿದೆ. ಇದರಿಂದ ಗ್ರೇಟ್‌ಬ್ರಿಟನ್ನಿನ ಐಕ್ಯತೆಗೆ ಧಕ್ಕೆ ಬರುತ್ತದೆಂದು ಯಾರೂ ಹೇಳುತ್ತಿಲ್ಲ. ಅನೇಕ ಶತಮಾನಗಳ ನಂತರ ಗೇಲಿಕ್ ಭಾಷೆ ಮತ್ತೆ ಐರ್‌ನ ಆಡಳಿತ ಭಾಷೆಯಾಗಿದೆ. "ನಮ್ಮ ಸ್ಥಿತಿ ಹೇಗಿದೆ? ಒಬ್ಬರಿಗೊಬ್ಬರು ತಪ್ಪು ಇಂಗ್ಲಿಷ್‌ನಲ್ಲಿ ಕಾಗದ ಬರೆಯುತ್ತೇವೆ. ಇಂಗ್ಲಿಷ್‌ನಲ್ಲಿ ಎಂ. ಎ ಮಾಡಿದವರೂ ಈ ತಪ್ಪು ಮಾಡುತ್ತಾರೆ. ಬಹುಕಾಲ ಹೀಗೆಯೇ ಮುಂದುವರಿದರೆ ಮುಂದಿನ ಪೀಳಿಗೆಯವರು ನಮ್ಮನ್ನು ಶಪಿಸಿಯಾರು" ಎಂದು ಗಾಂಧೀಜಿ ನಮ್ಮನ್ನು ಎಚ್ಚರಿಸಿದ್ದಾರೆ.

ಇಂಗ್ಲಿಷು ಶಿಕ್ಷಣ ಪಡೆದು ನಾವು ದೇಶವನ್ನು ಗುಲಾಮತನಕ್ಕೀಡುಮಾಡಿದ್ದೇವೆನ್ನುವುದು ಗಮನಿಸಬೇಕಾದ ವಿಷಯ. ನಮ್ಮ ವಿದ್ಯಾರ್ಥಿಗಳಲ್ಲಿ ರಾಗ ದ್ವೇಷ ದೌರ್ಜನ್ಯಗಳು ಹೆಚ್ಚಿವೆ. ಇಂಗ್ಲೀಷು ಕಲಿತ ಭಾರತೀಯರು ಸಾಮಾನ್ಯ ಜನರನ್ನು ಮೋಸಗೊಳಿಸಲು, ಬೆದರಿಸಲು ಯತ್ನಿಸುತ್ತಾರೆ. ಸಾಮಾನ್ಯ ಪ್ರಜೆ ಸರ್ಕಾರಿ ಕಛೇರಿಗಳಿಗೆ ನ್ಯಾಯಾಲಯಗಳಿಗೆ ಹೋಗಿ ಅಲ್ಲಿ ನಡೆಯುವುದನ್ನು ತಿಳಿದುಕೊಳ್ಳಬೇಕಾದರೆ ಇಂಗ್ಲಿಷು ತಿಳಿದಿರಲೇಬೇಕು. ಇಂಥ ಪರಿಸ್ಥಿತಿಯನ್ನು ಕಂಡು "ಇದಕ್ಕಿಂತ ಹೇಯವಾದ ಪ್ರಸಂಗವಿದೆಯೆ? ನ್ಯಾಯವಾದಿಯಾದವನೂ ತನ್ನ ಮಾತೃಭಾಷೆಯಲ್ಲಿ ವಾದಮಾಡುವುದಿಲ್ಲ. ಇದಕ್ಕಿಂತ ಮೂರ್ಖತನವುಂಟೆ? ಇದು ಗುಲಾಮಗಿರಿಯ ಹೆಗ್ಗುರುತಲ್ಲವೆ? ಇದಕ್ಕಾಗಿ ಇಂಗ್ಲಿಷನ್ನು ಬೈಯ್ಯಬೇಕೊ? ನಮ್ಮನ್ನೋ? ನಿಜವಾಗಿ ಇಂಗ್ಲಿಷ್‌ಕಲಿತ ನಾವುಗಳೆ ಭಾರತಕ್ಕೆ ಗುಲಾಮಗಿರಿಯ ಸಂಕೋಲೆ ತೊಡಿಸಿದವರು" ಎಂದು ಮರುಗಿದ್ದಾರೆ ಗಾಂಧೀಜಿ.

ನಮ್ಮ ದುರದೃಷ್ಟ, ನಮ್ಮ ಶಿಕ್ಷಣಕ್ಕೂ ಪರಿಸ್ಥಿತಿಗೂ ಸಂಬಂಧವೇ ಇಲ್ಲ. ಪ್ರಾರಂಭದಿಂದಲೇ ನಮ್ಮ ಹುಡುಗರು ಪಠ್ಯಪುಸ್ತಕಗಳಲ್ಲಿ ಓದುವುದು ತಮ್ಮ ಮನೆಯಲ್ಲಿ ನಿತ್ಯವೂ ಮಾಡಬೇಕಾದ ವಿಷಯಗಳಲ್ಲ, ತಮಗೆ ಸಂಬಂಧವೇ ಇಲ್ಲದ ಅಪರಿಚಿತ ವಿಷಯ. ಮನೆಯ ಬದುಕಿನಲ್ಲಿ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ಹುಡುಗರು ಪಾಠದಿಂದ ಕಲಿಯರು. ತನ್ನ ನೆರೆ ಹೊರೆಯ ಬಗ್ಗೆ ಹೆಮ್ಮೆ ಪಡುವುದನ್ನು ಕಲಿಯರು. ವಿದ್ಯಾಭ್ಯಾಸದಲ್ಲಿ ಎಷ್ಟು ಮೇಲೇರಿದರೆ ಅಷ್ಟು ನಮಗೆ ಮನೆಗೆ ಮನೆಯ ಬಾಳಿಗೆ ದೂರ. ಓದು ಮುಗಿಯುವ ವೇಳೆಗೆ ತನ್ನ ನೆರೆಹೊರೆಗೆ ಆತ ಅಪರಿಚಿತ. ಗೃಹ ಜೀವನದಲ್ಲಿ ಅವನಿಗೆ ರಸ ಕಾಣದು. ಹಳ್ಳಿಯ ದೃಶ್ಯಗಳು ಅವರಿಗೆ ತೀರಾ ಅನಾಗರೀಕವಾಗಿ ಕಾಣುತ್ತವೆ. ತಮ್ಮ ನಾಗರೀಕತೆ, ಸಂಸ್ಕೃತಿ ಕ್ರೂರ, ಅಶಕ್ತ, ಮೂಢ, ಅವ್ಯವಹಾರ್ಯ, ನಿಷ್ಪ್ರಯೋಜಕ ಎಂದು ಮಾತನಾಡುವುದನ್ನೂ ನಮ್ಮ ಹುಡುಗ ಹುಡುಗಿಯರಿಗೆ ಇಂಗ್ಲಿಷ್ ಪದ್ಧತಿಯ ಶಾಲೆಗಳಲ್ಲಿ ಕಲಿಸಲಾಗುತ್ತಿದೆ. ಒಟ್ಟಿನಲ್ಲಿ ಪರಂಪರಾನುಗತವಾದ ಸಂಸ್ಕೃತಿಯಿಂದ ಜನರನ್ನು ಅಗಲಿಸುವುದೇ ಇಂಗ್ಲಿಷ್ ಶಿಕ್ಷಣದ ಏರ್ಪಾಡು. ಅದರೂ ಕೆಲವರು ಈ ಹೊರೆಯ ಮಧ್ಯದಲ್ಲಿಯೂ ಉತ್ತಮರಾಗಿದ್ದಾರೆ. ಅಂಥವರ ಬಗ್ಗೆ "ಇಂಗ್ಲಿಷ್ ಶಿಕ್ಷಣ ಪಡೆದ ತರುಣರಲ್ಲಿ ಅನೇಕರು ಅವರ ಬೆಳವಣಿಗೆಗೆ ವಿರುದ್ಧವಾದ ಶಿಕ್ಷಣ ಪಡೆದರೂ ಸತ್ವಶಾಲಿಗಳೂ ರಾಷ್ಟ್ರಾಭಿಮಾನಿಗಳೂ ಆಗಿದ್ದಾರೆಂಬುದು ನಮ್ಮ ಸಂಸ್ಕೃತಿ ಅವರ ಹೃದಯದಲ್ಲಿ ಆಳವಾಗಿ ಬೇರುಬಿಟ್ಟಿರುವುದಕ್ಕೆ ಸಾಕ್ಷಿ. ನನ್ನ ಮಾತು ನಡೆಯುವ ಹಾಗಿದ್ದರೆ ಈಗಿನ ಪಠ್ಯಪುಸ್ತಕಗಳನ್ನೆಲ್ಲಾ ನಾಶಮಾಡಿ ನಮ್ಮ ಪರಿಸ್ಥಿತಿಗೆ ಹೊಂದುವಂಥ ಪುಸ್ತಕಗಳನ್ನು ಬರೆಸುತ್ತಿದ್ದೆ. ಹುಡುಗ ಶಿಕ್ಷಣ ಪಡೆಯುತ್ತಿದ್ದಂತೆಯೇ ಜೀವನದಲ್ಲಿ ಪ್ರಭಾವ ಕಂಡುಬರಬೇಕು" ಎಂಬುದು ಗಾಂಧೀಜಿಯವರ ಸ್ಪಷ್ಟ ಅಭಿಪ್ರಾಯ.

ಈಗ ಕೊಡುತ್ತಿರುವ ಇಂಗ್ಲಿಷ್ ವಿದ್ಯಾಭ್ಯಾಸ ಭಾರತೀಯರನ್ನು ನಿರ್ವೀರ್ಯರನ್ನಾಗಿ ಮಾಡಿದೆ. ನಮ್ಮ ವಿದ್ಯಾರ್ಥಿಗಳ ಶಕ್ತಿ ಸಾಮರ್ಥ್ಯಗಳಿಗೆ ಇಂಗ್ಲಿಷ್ ಶಿಕ್ಷಣ ಮಾಧ್ಯಮ ಒಂದು ಹೊರೆಯಾಗಿದೆ. ಏನು ಗ್ರಹಿಸಬೇಕು, ಏನು ಬಿಡಬೇಕೆಂಬುದು ವಿದ್ಯಾರ್ಥಿಗಳಿಗೆ ತಿಳಿದಿರಬೇಕು. ಈ ವಿವೇಚನೆಯನ್ನು ಶಿಕ್ಷಣ ಕಲಿಸದೆ ಎಲ್ಲವನ್ನೂ ತುರುಕಿದರೆ ವಿದ್ಯಾರ್ಥಿ ಯಂತ್ರಗಳಿಗಿಂತ ಕಡೆಯಾಗುತ್ತಾನೆ. ವಿಚಾರಮಾಡುವ ಜೀವಿ ಮನುಷ್ಯ. ಸತ್ಯಾಸತ್ಯಗಳ ಭೇದ ರುಚಿ ಅರುಚಿಗಳ ಭೇದ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಆದರೆ ಇಂದಿನ ವಿದ್ಯಾರ್ಥಿ ಒಳ್ಳೆಯದು ಕೆಟ್ಟದರ ಅಂತರವನ್ನು ಅರಿತುಕೊಳ್ಳುವುದರಲ್ಲಿ ವಿಫಲನಾಗಿದ್ದಾನೆ. ಇದರ ಕಾರಣವನ್ನು "ಇಂದಿನ ವಿದ್ಯಾರ್ಥಿ ಉಸಿರು ಕಟ್ಟಿಸುವಷ್ಟು ಪುಸ್ತಕ ರಾಶಿಯ ಮಧ್ಯೆ ಸಿಕ್ಕಿಕೊಂಡು ಯಾವುದನ್ನೂ ಸರಿಯಾಗಿ ಅರ್ಥಮಾಡಿಕೊಳ್ಳಲಾರದೆ ಸಮಾಜ ಕಂಟಕನಾಗುತ್ತಿದ್ದಾನೆ. ಇದು ಇಂಗ್ಲಿಷ್ ಶಿಕ್ಷಣದ ಫಲ. ದೇಶ ಭಾಷೆಗಳನ್ನು ನಿರ್ನಾಮ ಮಾಡಿದುದು ಬ್ರಿಟಿಷರ ಸಂಪರ್ಕ. ಇತಿಹಾಸದಲ್ಲಿ ಇದು ಅತ್ಯಂತ ವಿಷಾದಕರ ಪ್ರಕರಣ. ಇಂಗ್ಲಿಷಿನಲ್ಲಿ ಆಲೋಚನೆಮಾಡಿ ಇಂಗ್ಲಿಷಿನಲ್ಲಿ ಹೇಳಬೇಕಾದುದು ಇಲ್ಲದಿದ್ದರೆ, ರಾಜಾರಾಮ್ ಮೋಹನ ರಾಯ್ ಇನ್ನೂ ದೊಡ್ಡವರಾಗುತ್ತಿದ್ದರು. ಲೋಕಮಾನ್ಯ

ತಿಲಕರು ಇನ್ನೂ ದೊಡ್ಡ ವಿದ್ವಾಂಸರಾಗುತ್ತಿದ್ದರು. ತಮ್ಮ ಜನತೆಯ ಮೇಲೆ ಅವರು ಬೀರಿದ ಪ್ರಭಾವ ಅದ್ಭುತ. ಆದರೆ ಇಷ್ಟು ಅಸಹಜವಲ್ಲದ ವಾತಾವರಣದಲ್ಲಿ ಅವರು ಬೆಳೆದು ಬಂದಿದ್ದರೆ ಆ ಪ್ರಭಾವ ಇನ್ನೂ ಪ್ರಬಲವಾಗುತ್ತಿತ್ತು. ಇಬ್ಬರೂ ಇಂಗ್ಲಿಷ್ ಸಾಹಿತ್ಯ ಭಂಡಾರದಿಂದ ಅಪಾರ ಲಾಭ ಪಡೆದರು ನಿಜ. ಆದರೆ ಇದು ಅವರಿಗೆ ತಮ್ಮ ಮಾತೃಭಾಷೆಗಳ ಮೂಲಕ ದೊರಕಬೇಕಾಗಿತ್ತು. ಇಂಗ್ಲಿಷು ಗೊತ್ತಿಲ್ಲದಿದ್ದರೆ ರಾಜಾರಾಮ್ ಮೋಹನರಾಯ್, ಲೋಕಮಾನ್ಯ ತಿಲಕರು ಈ ರೀತಿ ವಿಚಾರ ಮಾಡುತ್ತಿರಲಿಲ್ಲ ಎಂಬುದನ್ನು ನಾನು ನಂಬುವುದಿಲ್ಲ." ಎಂದು ಗಾಂಧೀಜಿ ಸಮರ್ಥ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ.

ಬರಿಯ ಅನುಕರಣಪಟುಗಳನ್ನು ಸೃಷ್ಟಿಸಿ ಯಾವ ದೇಶವೂ ಮಹಾರಾಷ್ಟ್ರವಾಗಲಾರದು. ಇಂಗ್ಲಿಷರಿಗೆ ಬೈಬಲ್ಲಿನ ಅಧಿಕೃತ ಭಾಷಾಂತರ ಇಲ್ಲದಿದ್ದರೆ ಅವರ ಸ್ಥಿತಿ ಏನಾಗುತ್ತಿತ್ತೋ? ಭಾರತದಲ್ಲಿರುವ ಅನೇಕ ಮೂಢನಂಬಿಕೆಗಳಲ್ಲಿ, ಇಂಗ್ಲಿಷು ಬಾರದಿದ್ದವನಿಗೆ ಹೊಸ ವಿಚಾರಗಳು, ವೈಜ್ಞಾನಿಕ ದೃಷ್ಟಿಯಿಲ್ಲ ಎಂಬುದು ತೀರಾ ಹುರುಳಿಲ್ಲದ್ದು. ಭಾರತೀಯ ಶಿಕ್ಷಣ ಪದ್ಧತಿ ತೀರಾ ನಿಷ್ಪ್ರಯೋಜಕವೆಂದು ಇಂಗ್ಲಿಷ್ ಆಳರಸರು ಭಾವಿಸಿದರು. ಭಾರತೀಯ ದೇಹ ಮನ ಆತ್ಮಗಳನ್ನು ಕ್ಷೀಣಗೊಳಿಸುವುದೇ ಅವರ ಉದ್ದೇಶವಾಗಿತ್ತು. ಇದನ್ನ ಇತಿಹಾಸ ಗಮನಿಸುತ್ತದೆ. "ಮಕ್ಕಳ ಮೇಲೆ ಇಂಗ್ಲಿಷನ್ನು ಹೇರುವುದು ಅವರ ಬೆಳವಣಿಗೆಯನ್ನು ಮೊಟಕಿಸಿ, ಬಹುಶಃ ಅವರ ಸ್ವಬುದ್ಧಿಯನ್ನು ಸಾಯಿಸಿದ ಹಾಗೆ. ಭಾಷೆಯನ್ನು ಕಲಿಸುವುದು ಎಂದರೆ ಜ್ಞಾಪಕಶಕ್ತಿಯನ್ನು ಬೆಳೆಸುವುದು. ಮೊದಲಿನಿಂದಲೆ ಇಂಗ್ಲಿಷನ್ನು ಕಲಿಯುವುದು ಮಗುವಿನ ತಲೆಯ ಮೇಲೆ ಗುಡ್ಡವನ್ನು ಹೊರಿಸಿದ ಹಾಗೆ. ಅದನ್ನು ಕಲಿಯಲು ಹೋಗಿ ಮಾತೃಭಾಷೆಗೆ ಎಷ್ಟು ನಷ್ಟ! ಹಳ್ಳಿಯ ಮಗುವಿಗೆ ಹೇಗೋ, ಪಟ್ಟಣದ ಮಗುವಿಗೂ ಹಾಗೇ ಮಾತೃಭಾಷೆಯ ಗಟ್ಟಿ ತಳಹದಿ ಅಗತ್ಯ, ಅವರ ಬೆಳವಣಿಗೆಗೆ. ಈ ದೌರ್ಭಾಗ್ಯದಷ್ಟ ಭಾರತದಲ್ಲಿಯೇ ಈ ಮಾತನ್ನು ತರ್ಕಮಾಡಬೇಕಾಗಿ ಬಂದಿದೆ." ಎಂದು ಗಾಂಧೀಜಿ ನೊಂದುಕೊಂಡಿದ್ದಾರೆ.

ಗಾಂಧೀಜಿಯವರದು ಎಂದೂ ಸಂಕುಚಿತ ಮನಸ್ಸಲ್ಲ. ಅವರು ಪ್ರಪಂಚದ ಎಲ್ಲ ಧರ್ಮ, ಎಲ್ಲ ಜನಾಂಗ, ಎಲ್ಲ ಭಾಷೆಗಳನ್ನೂ ಗೌರವಿಸಿದ ಉದಾರ ಹೃದಯಿ. ಶಿಕ್ಷಣ ಮಕ್ಕಳಿಗೆ ಹೊರೆಯಾಗಬಾರದು, ರಾಷ್ಟ್ರಕ್ಕೆ ನಷ್ಟವಾಗಬಾರದೆಂದು ಅವರ ಆಶಯ. ಉತ್ತಮವಾದುದನ್ನು ಯಾವ ಕಡೆಯಿಂದಲಾದರೂ ಸ್ವೀಕರಿಸುವುದು ಗಾಂದೀಜಿಯವರ ಉದಾರ ಗುಣ. ಆದುದರಿಂದಲೇ "ನನ್ನ ಮನೆಗೆ ಸುತ್ತಲೂ ಗೋಡೆಕಟ್ಟಿ ಕಿಟಕಿಗಳನ್ನೆಲ್ಲ ಮುಚ್ಚಿಬಿಡಬೇಕೆಂಬುದು ನನ್ನ ಬಯಕೆಯಲ್ಲ. ಎಲ್ಲ ದೇಶಗಳ ಸಂಸ್ಕೃತಿಯ ಗಾಳಿಯೂ ನನ್ನ ಮನೆಯಲ್ಲಿ ನಿರಾತಂಕವಾಗಿ ಬೀಸಲಿ. ನಾನು ಮಾತ್ರ ಯಾವುದಕ್ಕೂ ಉರುಳಿ ಬೀಳುವುದಿಲ್ಲ. ಪರರ ಮನೆಯಲ್ಲಿ ತಿರುಪೆ ಎತ್ತಲೂ ಆರೆ, ತಲೆಹೋಕನಾಗಿಯೂ ಇರಲಾರೆ. ಸುಳ್ಳು ಜಂಬಕ್ಕಾಗಿ ಸಲ್ಲದ ಬಡಾಯಿಗಾಗಿ ನನ್ನ ತಂಗಿಯರಿಗೆ ಇಂಗ್ಲಿಷ್ ಕಲಿಸುವ ಕಷ್ಟ ಕೊಡಲಾರೆ. ಸಾಹಿತ್ಯಾಭಿರುಚಿಯುಳ್ಳ ನಮ್ಮ ತರುಣ ತರುಣಿಯರು

ಇಂಗ್ಲಿಷನ್ನು, ಇತರ ಭಾಷೆಗಳನ್ನು ಬೇಕಾದಷ್ಟು ಕಲಿಯಲಿ. ಜಗದೀಶಚಂದ್ರ ಬೋಸರಂತೆ, ಪ್ರಫುಲ್ಲಚಂದ್ರರಾಯರಂತೆ, ರವೀಂದ್ರನಾಥರಂತೆ ಪಾಂಡಿತ್ಯವನ್ನು ಜನರಿಗೆ ಕೊಡಲಿ. ಆದರೆ ಭಾರತೀಯರು ಯಾರೇ ಆಗಲಿ ಮಾತೃಭಾಷೆಯನ್ನು ಮರೆತರೆ, ಅಸಡ್ಡೆ ಮಾಡಿದರೆ, ಹೀನವೆಂದು ತಿಳಿದರೆ ನಾವು ಒಪ್ಪುವುದಿಲ್ಲ." ಎಂದು ಖಂಡಿತವಾಗಿ ಹೇಳಿದ್ದಾರೆ.

ನೀರಿನಂಥ ಇಂಗ್ಲಿಷನ್ನು ನೂರು ಜನಕ್ಕೆ ಕಲಿಸುವ ಬದಲು ಹಾಲಿನಂಥ ಇಂಗ್ಲಿಷನ್ನು ಹತ್ತು ಜನಕ್ಕೆ ಕಲಿಸುವುದು ಭಾಷೆಗೂ ರಾಷ್ಟ್ರಕ್ಕೂ ಒಳ್ಳೆಯದೆಂದು ನಂಬಿದವರು ಗಾಂಧೀಜಿ. ನಮ್ಮ ದೇಶದ ಇಂಗ್ಲಿಷು ಪದ್ಧತಿಯ ಶಾಲೆಗಳಲ್ಲಿ ಭಾರತೀಯ ಸಂಸ್ಕೃತಿ ಮತ್ತು ಭಾಷೆಗಳ ಬಗ್ಗೆ ಮಕ್ಕಳ ಮನಸ್ಸಿನಲ್ಲಿ ನಿರಭಿಮಾನ ಹುಟ್ಟಿಸಲಾಗುತ್ತಿದೆ. ಇಂಥ ಎಳೆಯ ವಯಸ್ಸಿನಲ್ಲಿ ಹುಟ್ಟುವ ಭಾವನೆಗಳು ಕಡೆಯವರೆಗೆ ಉಳಿದುಬಿಡುತ್ತವೆಂಬುದನ್ನು ಮರೆಯುವಂತಿಲ್ಲ. ಇಂಗ್ಲಿಷು ಕಲಿತವರು ಕಲಿಯದವರಿಗಿಂತ ಉತ್ತಮದರ್ಜೆಯೆಂಬ ಅಹಂಕಾರ ಮಕ್ಕಳನ್ನು ಅಧೋಗತಿಗೆಳೆಯುತ್ತದೆ. ಇಂಥ ಬಲಾತ್ಕಾರದ ಕಲಿಕೆಗೆ ಗಾಂಧೀಜಿ ಬದ್ಧ ವಿರೋಧಿ. "ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವಿರಬೇಕು. ಅವರು ಬರೀ ಅನುಕರಣಶೀಲರಾಗಬಾರದು. ಆದರೂ ಸಂಪೂರ್ಣ ವಿಧೇಯರಾಗಿರಬೇಕು. ಎಷ್ಟೇ ಸದುದ್ದೇಶವಿದ್ದರೂ ಇಂಗ್ಲಿಷಿನ ವ್ಯಾಮೋಹಕ್ಕೊಳಗಾದ ಅಧ್ಯಾಪಕರಿಗೆ ಭಾರತೀಯ ಮಕ್ಕಳಿಗೇನು ಬೇಕು ಎಂಬುದು ಸಂಪೂರ್ಣವಾಗಿ ಅರ್ಥವಾಗಿಲ್ಲ. ಈಗ ಶಾಲೆಗಳಲ್ಲಿ ಕೊಡುವ ಓದು ಬರಹ ಗಣಿತ ವಿಜ್ಞಾನಗಳು ಮಕ್ಕಳಿಗೆ ಮುಂದೆ ಜೀವನದಲ್ಲಿ ಏನೂ ಪ್ರಯೋಜನವಾಗವು ಎಂಬುದನ್ನು ಎಲ್ಲರೂ ಒಪ್ಪಬೇಕು. ವಿದ್ಯಾಭ್ಯಾಸ ಮುಗಿದ ಒಂದು ವರ್ಷದೊಳಗೆ ಅದರಲ್ಲಿ ಹೆಚ್ಚು ಪಾಲು ಉಪಯೋಗವಿಲ್ಲದೆ ಮರೆತು ಹೋಗುತ್ತದೆ." ಆದುದರಿಂದ ಬಲಾತ್ಕಾರಕ್ಕೆ ವಿರೋಧವೇ ವಿನಾ ಭಾಷೆಗಲ್ಲ.

ಈ ಕಾರಣದಿಂದಲೇ ಶಿಕ್ಷಣ ಮಾತೃಭಾಷೆಗಳ ಮೂಲಕ ನಡೆಯಬೇಕೆಂಬುದು ಎಲ್ಲ ಶಿಕ್ಷಣ ತಜ್ಞರ ಮತ. ಗಾಂಧೀಜಿಯವರು ಈ ಬಗ್ಗೆ ಅಪಾರವಾಗಿ ಪ್ರಯೋಗ ನಡೆಸಿದವರು. ಕೆಲಸದೊಂದಿಗೆ ಕಲಿಕೆ ಎಂಬುದು ಗಾಂಧೀಜಿಯವರ ಸೂತ್ರ. ಭಾರತಕ್ಕೆ ಬೇಕಾದುದು ಅದೇ. ಅವರೇ ರಚಿಸಿ ಪ್ರಯೋಗಿಸಿ ಅನುಷ್ಠಾನಕ್ಕೆ ತಂದ ಮೂಲಶಿಕ್ಷಣ ಪದ್ಧತಿ ಅವರೊಂದಿಗೇ ನಶಿಸಿಹೋಯಿತು. ರಾಜಕೀಯ ಅನಿಶ್ಚಯ, ರಾಜಕಾರಣಿಯ ಚಂಚಲ ಪ್ರವೃತ್ತಿ, ಇಂಗ್ಲಿಷ್ ವ್ಯಾಮೋಹಿಗಳ ಪಿಸುಣತನದಿಂದಾಗಿ ಭಾರತ ಶಿಕ್ಷಣ ಮಾಧ್ಯಮವನ್ನು ಮಾತೃ ಭಾಷೆಗಳಿಗೆ ಪರಿವರ್ತಿಸಲು ಮೀನಾಮೇಷ ಎಣಿಸಲಾಗುತ್ತಿದೆ. ಈ ವಿಷಯದ ಬಗ್ಗೆ ರಾದ್ಧಾಂತವಾಗುವಷ್ಟು ಚರ್ಚೆ ನಡೆದಿದೆ. ಆದರೆ ಜನಶಕ್ತಿಯನ್ನು ಎದುರಿಸಿ ನಿಲ್ಲುವ ಶಕ್ತಿ ಇವರಿಗಿಲ್ಲದಿರುವ ಕಾರಣ ಪರಿವರ್ತನೆ ನಿಧಾನವಾಗಿ ಆಗಲಿ ಎಂದು ನುಣಿಚಿಕೊಂಡು ಕಾಲಹರಣ ಮಾಡಲು ಯತ್ನಿಸುತ್ತಾರೆ. ಈ ಬಗ್ಗೆ ಗಾಂಧಿ ೀಜಿಯವರ ಅಭಿಪ್ರಾಯ ಹೀಗಿದೆ : "ಶಿಕ್ಷಣ ಮಾಧ್ಯಮವನ್ನು ಈ ಕ್ಷಣದಲ್ಲೇ ಬದಲಾಯಿಸಬೇಕು. ದೇಶಭಾಷೆಗಳಿಗೆ ಸರಿಯಾದ ಸ್ಥಾನ ಕೊಡಬೇಕು. ಉನ್ನತ ವಿದ್ಯೆ ಸ್ವಲ್ಪ ಗೊಂದಲವಾದರೂ ಪರವಾಗಿಲ್ಲ."

ಭಾರತೀಯ ಭಾಷೆಗಳು ಶಿಕ್ಷಣ ಮಾಧ್ಯಮವಾಗಲು ಸಾಕಷ್ಟು ಬೆಳೆಯಬೇಕೆಂಬುದು ಒಂದು ವಾದ. ಅನೇಕ ಭಾರತೀಯ ಭಾಷೆಗಳಿಗೆ ಸಾವಿರಾರು ವರ್ಷಗಳಷ್ಟು ಬೆಳವಣಿಗೆಯ ಚರಿತ್ರೆಯಿದ್ದು ಅವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿವೆ. ಭಾರತೀಯ ಪ್ರಾಂತ್ಯ ಭಾಷೆಗಳ ಬಗ್ಗೆ ಮಾತನಾಡುವವರೆಲ್ಲರೂ ಇಂಗ್ಲಿಷಿನ ಬೆಳವಣಿಗೆಯ ಅಳತೆಗೋಲನ್ನಿಟ್ಟುಕೊಂಡೆ ಮಾತಾಡುತ್ತಾರೆ. ಇಂಗ್ಲಿಷು ವಿಶ್ವದ ಭಾಷೆಯೆಂದು ಉಬ್ಬಿ ಹೇಳುವವರು ಆ ಭಾಷೆ ವಿಶ್ವವ್ಯಾಪಿಯಾಗಲು ಇಂಗ್ಲಿಷರ ಭಾಷಾಭಿಮಾನ ಕಾರಣ ಎಂಬುದನ್ನು ಮರೆಯಬಾರದು. ಬೈಬಲನ್ನು ಪ್ರಪ್ರಥಮವಾಗಿ ಇಂಗ್ಲಿಷಿಗೆ ಅನುವಾದ ಮಾಡಿದವನು ಜೀವ ಸಹಿತ ಅಗ್ನಿಗೆ ಆಹುತಿಯಾದ. ಇಂಗ್ಲಿಷರು ತಾವು ಹೋದ ಕಡೆಯಲ್ಲೆಲ್ಲ ತಮ್ಮ ಭಾಷೆಯನ್ನು ಬಿತ್ತಿದರು. ಎಲ್ಲಕ್ಕಿಂತ ಹೆಚ್ಚಾಗಿ ಇಂಗ್ಲಿಷು ಪ್ರಪಂಚದ ಎಲ್ಲ ಭಾಷೆಗಳಿಂದಲೂ ವಿಷಯ ಮತ್ತು ಪದಸಂಪತ್ತನ್ನು ಪಡೆದು ವೃದ್ಧಿಯಾಗಿದೆ. ಇಂಥ ಭಾಷಾ ಪ್ರೇಮ, ಸಾಹಸಪ್ರಿಯತೆ ಎಷ್ಟು ಜನ ಭಾರತೀಯರಿಗಿದೆ? ಭಾರತೀಯ ಭಾಷೆಗಳು ಬೆಳೆಯಲು ಗಾಂಧೀಜಿಯವರ ಸೂತ್ರ ಎಷ್ಟು ಸೂಕ್ತ! – "ಪ್ರಾಂತೀಯ ಭಾಷೆಗಳ ಬೆಲೆ ಹೆಚ್ಚಿಸಲು, ಅವುಗಳಿಗೆ ತಕ್ಕ ಸ್ಥಾನ ಕೊಡಲು ಅವುಗಳನ್ನು ಶಿಕ್ಷಣ ಮಾಧ್ಯಮ, ಆಡಳಿತ ನ್ಯಾಯಾಲಯಗಳ ಭಾಷೆಯಾಗಿ ಮಾಡಬೇಕು. ಶಾಸನ ಸಭೆಗಳ ಕಾರ್ಯಕಲಾಪಗಳು ಆಯಾ ಪ್ರಾಂತ್ಯ ಭಾಷೆಯಲ್ಲಿ ನಡೆಯಬೇಕು."

ಬೆಳವಣಿಗೆಯಲ್ಲಿ ದೋಷಗಳಿದ್ದೇ ಇರುತ್ತವೆ. ಪ್ರಪಂಚದ ಯಾವ ಭಾಷೆಯೂ ದೋಷಮುಕ್ತವಲ್ಲ. ಅದು ಬೆಳವಣಿಗೆಯ ಲಕ್ಷಣವೂ ಅಲ್ಲ. ಆದುದರಿಂದಲೇ "ತಾಯಿಯ ಎದೆಗೆ ಅವಚಿಕೊಳ್ಳುವಂತೆ ನಾನು ತಾಯಿ ನುಡಿಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ಅದರಲ್ಲಿ ಎಷ್ಟೇ ಲೋಪದೋಷಗಳಿರಲಿ. ಅದೊಂದೇ ನನಗೆ ಅಮೃತದಾನ ಮಾಡಬಲ್ಲದು. ಹಾಗೇ ನೋಡಿದರೆ ಇಂಗ್ಲಿಷ್ ಭಾಷೆಯ ಬಗ್ಗೆ ನನಗೇನೂ ದ್ವೇಷವಿಲ್ಲ. ಆದರೆ ತನ್ನದಲ್ಲದ ಸ್ಥಾನವನ್ನು ಆಕ್ರಮಿಸಿದರೆ ನಾನದಕ್ಕೆ ಬದ್ಧವೈರಿ" ಎಂದಿದ್ದಾರೆ ಗಾಂಧೀಜಿ.

ಶಿಕ್ಷಣ ಮಾಧ್ಯಮದ ಪರಿವರ್ತನೆಯ ಹಾದಿಯಲ್ಲಿ ಅಡ್ಡ ಬರುವ ಮತ್ತೊಂದು ಸಮಸ್ಯೆ ಪಠ್ಯ ಪುಸ್ತಕಗಳ ಕೊರತೆ ಎಂದು ಕೆಲವರ ವಾದ. ಹಾಗೆ ನೋಡಿದರೆ ನಮ್ಮಲ್ಲಿ ಇಂಗ್ಲಿಷಿನಲ್ಲಿಯೂ ಉತ್ತಮ ಪಠ್ಯ ಪುಸ್ತಕಗಳಿವೆಯೆ? ಇಂಗ್ಲಿಷ್ ಭಾಷಾಭ್ಯಾಸಿಗಳು, ಪಾಶ್ಚಾತ್ಯರು ಬರೆದ ಪುಸ್ತಕಗಳಿಗೇ ಮೊರೆಹೋಗಬೇಕಾಗಿದೆ. ಆದುದರಿಂದ ನಮ್ಮಲ್ಲಿಲ್ಲದ ಪುಸ್ತಕಗಳನ್ನು ಭಾಷಾಂತರಿಸಿಕೊಳ್ಳಬಹುದು. ಅನೇಕ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಪ್ರಾಂತೀಯ ಭಾಷಾ ಪಠ್ಯಪುಸ್ತಕ ನಿರ್ಮಿತಿಯಲ್ಲಿ ದಾಖಲೆಗಳನ್ನೇ ಸ್ಥಾಪಿಸಿದ್ದಾರೆ. ಇಂಗ್ಲಿಷಿನಲ್ಲಿ ಕೂಡ ಅನೇಕ ಶಾಸ್ತ್ರಗ್ರಂಥಗಳು ಅನುವಾದದ ಮೂಲಕ ಬಂದಿವೆ. ಜಪಾನು, ರಷ್ಯಾ ಮುಂತಾದ ದೇಶಗಳಲ್ಲಿ ಪ್ರಪಂಚದ ಯಾವುದೇ ಭಾಷೆಯ ಉತ್ತಮ ವೈಜ್ಞಾನಿಕ ಗ್ರಂಥವನ್ನು ಅಲ್ಲಿನ ಭಾಷೆಗಳಿಗೆ ಒಂದು ತಿಂಗಳೊಳಗೆ ಅನುವಾದ ಮಾಡುವ ಏರ್ಪಾಡಿದೆಯಂತೆ. ಅಲ್ಲದೆ "ಶಿಕ್ಷಣ ಮಾಧ್ಯಮವನ್ನು ಕ್ರಮೇಣ ಬದಲಾಯಿಸಬಾರದು. ಒಮ್ಮೆಲೇ ಬದಲಾಯಿಸಬೇಕು. ಆಗ ಪಠ್ಯ ಪುಸ್ತಕಗಳು ಉಪಾಧ್ಯಾಯರು ನಂಬಲಿಕ್ಕೂ

ಆಗದಷ್ಟು ಸಮಯದಲ್ಲಿ ನಮಗೆ ಲಭಿಸುತ್ತವೆ. ಒಮ್ಮೆಲೇ ಕೋರ್ಟು ಕಛೇರಿಗಳಲ್ಲಿ ದೇಶ ಭಾಷೆಗಳನ್ನು ರೂಢಿಗೆ ತರಬೇಕು. ಈ ಸುಧಾರಣೆಯಲ್ಲಿ ನಮಗೆ ನಂಬಿಕೆ ಇದ್ದರೆ ಪಠ್ಯ ಪುಸ್ತಕಗಳನ್ನು ಒಂದು ಗಳಿಗೆಯಲ್ಲಿ ಮಾಡಿಬಿಡಬಹುದು" ಎಂಬ ಗಾಂಧೀಜಿಯವರ ಮಾತು ಗಮನಾರ್ಹ. ಜಪಾನು ರಷ್ಯಗಳಿಗೆ ಸಾಧ್ಯವಾದುದು ಭಾರತಕ್ಕೆ ಸಾಧ್ಯವಿಲ್ಲ ಎಂಬ ಮಾತು ನಂಬಲಾರದಂತಹದ್ದು.

ಪ್ರಾಂತೀಯ ಭಾಷೆಗಳಿಗೆ ಶಿಕ್ಷಣ ಪರಿವರ್ತನೆಯಾದರೆ ನಮ್ಮ ವೈಜ್ಞಾನಿಕ ಪ್ರಗತಿ ಕುಂಠಿತವಾಗುತ್ತದೆ ಎಂಬುದು ಅನೇಕರ ವಾದ. ಇದು ಈಜು ಬಂದ ಹೊರತು ನೀರಿಗಿಳಿಯುವುದಿಲ್ಲ, ನೀರಿಗಿಳಿದ ಹೊರತು ಈಜು ಬರುವುದಿಲ್ಲ ಎಂಬ ಮಾತಿನಂತಿದೆ. ರಷ್ಯಾ, ಜಪಾನು, ಸ್ವಿಸ್ ದೇಶಗಳು ತಮ್ಮ ತಮ್ಮ ಮಾತೃ ಭಾಷೆಯಲ್ಲಿ ಶಿಕ್ಷಣ ನೀಡಿ ವಿಜ್ಞಾನದಲ್ಲಿ ಮುಂದುವರಿದಿರುವುದರ ರಹಸ್ಯವೇನು? ನೋಬೆಲ್ ಪಾರಿತೋಷಕ ಪಡೆದ ಜಪಾನಿನ ಪ್ರಾಧ್ಯಾಪಕರೊಬ್ಬರಿಗೆ ಇಂಗ್ಲಿಷು ಬರದು ಎಂಬ ವಿಷಯ ಗಮನಿಸಬೇಕು. ಇದಂತೂ ಬಹಳ ವಿಚಿತ್ರವಾಗಿ ಕೇಳಿಬರುತ್ತದೆ. ಪ್ರಪಂಚದ ಅನೇಕ ರಾಷ್ಟ್ರಗಳ ವೈಜ್ಞಾನಿಕ ತತ್ವಗಳು ಆಯಾ ದೇಶ ಭಾಷೆಗಳಲ್ಲಿ ತಯಾರಾಗಿವೆ. ನ್ಯೂಟನ್ನನ ಭೂಮ್ಯಾಕರ್ಷಣ ತತ್ವ ಜರ್ಮನ್ ಭಾಷೆಯಲ್ಲಿದೆ ಎಂದರೆ, ಇಂಗ್ಲಿಷನ್ನು ಬಿಟ್ಟರೆ ವಿಜ್ಞಾನವಿಲ್ಲ ಎನ್ನುವವರಿಗೆ ಗಾಬರಿಯಾಗಬಹುದು. ಜಪಾನು ರಷ್ಯಾಗಳಿಗೆ ಸಾಧ್ಯವಾದ ಕೆಲಸ ಭಾರತೀಯರಿಗೆ ಸಾಧ್ಯವಿಲ್ಲ ಎನ್ನುವುದಾದರೆ ನಮ್ಮ ವಿಜ್ಞಾನಿಗಳಿಗೆ ವಿಜ್ಞಾನ ಸರಿಯಾಗಿ ತಿಳಿದಿಲ್ಲ ಎನ್ನಬೇಕಾಗುತ್ತದೆ. ಆದುದರಿಂದಲೇ ಗಾಂಧೀಜಿ "ರಷ್ಯಾ ಇಂಗ್ಲಿಷಿಲ್ಲದೆಯೇ ವೈಜ್ಞಾನಿಕ ಪ್ರಗತಿಯನ್ನು ಸಾಧಿಸಿದೆ. ಇಂಗ್ಲಿಷಿಲ್ಲದೆ ಸಾಧ್ಯವಿಲ್ಲ ಎಂಬುದು ನಮ್ಮ ಮಾನಸಿಕ ದಾಸ್ಯ. ಇಂಥಾ ಆಶಾಹೀನ ತತ್ವವನ್ನು ನಾನು ಎಂದಿಗೂ ಒಪ್ಪಲಾರೆ" ಎಂದಿದ್ದಾರೆ.

ಶಿಕ್ಷಣ ಮಾಧ್ಯಮದ ಬಗ್ಗೆ ಗಾಂಧೀಜಿಯವರದು ಸ್ಪಷ್ಟವಾದ ಅಭಿಪ್ರಾಯ. ಮಾತೃ ಭಾಷೆಗಳ ಮಹತ್ತನ್ನು ಅರಿತು ಅವರು ಹೇಳಿದ್ದಾರೆ. ಶಿಕ್ಷಣ ತಜ್ಞರು, ಆಧುನಿಕ ಮನಶ್ಶಾಸ್ತ್ರ ಮಾತೃಭಾಷಾ ಶಿಕ್ಷಣವೇ ಸರ್ವೋತ್ತಮ ಎಂದು ಸಾರಿದೆ. ಆದುದರಿಂದ ತಾತ್ಕಾಲಿಕ ಅಡೆತಡೆಗಳಿದ್ದರೂ ಇದು ಆಗೇ ಆಗಬೇಕಾದ ಪರಿವರ್ತನೆ, ಆಗೇ ಆಗುತ್ತದೆ. ಏಕೆಂದರೆ "ತನ್ನ ಮಾತೃಭಾಷೆಯನ್ನು ಕುರಿತ ಅಭಿಮಾನ, ಅದರ ಅಭಿವೃದ್ಧಿಯ ತೀವ್ರ ಹಂಬಲ, ಅದರ ಸೌಂದರ್ಯದಲ್ಲಿ ಹರ್ಷ, ಅದರ ಬೆಳವಣಿಗೆಗಾಗಿ ಕಾರ್ಯತತ್ಪರತೆ ಪ್ರತಿಯೊಬ್ಬ ವಿದ್ಯಾವಂತನ ಕರ್ತವ್ಯಗಳು." ಎಷ್ಟೇ ಬಲಶಾಲಿಯಾದ, ಉಪಾಯ ಸಮರ್ಥವಾದ ಸರ್ಕಾರವಾಗಲಿ ಒಬ್ಬನ ಮಾತೃಭಾಷೆಯನ್ನು ಎಲ್ಲಿಯೂ ಕೂಡ ದುರ್ಬಲಗೊಳಿಸಲು ಸಾಧ್ಯವಾಗಿಲ್ಲ. ನಮ್ಮ ರಾಜಕಾರಣಿಗಳು ಭಾಷಾವಾದವೆಂದು ಕರೆಯುವ ಈ ಮಹತ್ತರ ಕ್ರಿಯೆ ಎಲ್ಲೆಲ್ಲಿಯೂ ಪ್ರೋತ್ಸಾಹಗೊಳ್ಳುತ್ತಿರುವುದನ್ನು ಎಲ್ಲರೂ ಕಾಣಬಹುದು. ಗತಕಾಲದ ನಿರಂಕುಶ ರಾಜ್ಯಗಳನ್ನು ಬಿಟ್ಟರೆ, ಭಾರತದ ಹೊರಗೆ ಯಾರೂ ಪ್ರಾಂತೀಯ ಭಾಷೆಗಳ ಬೆಳವಣಿಗೆ ಅಪಾಯಕಾರಿಯೆಂದು ಭಾವಿಸಲಿಲ್ಲ.

* * *

ಜನಲಪದ ನಿಲಯದ ಅಂತರಂಗದಲ್ಲಿ ------ ೩೮

– ಸುರೇಂದ್ರ ಕೌಲಗಿ

ಒಳ್ಳೆಯ ಆಲೋಚನೆ ಮತ್ತು ಒಳ್ಳೆಯ ಹೃದಯದ ಜೋಡಿ ಎಂದಿಗೂ ಅಜೇಯ.
– ನೆಲ್ಸನ್ ಮಂಡೇಲಾ



ಪದ್ಮ ಎಂಬುವವರು ಸಂಕ್ಷಿಪ್ತ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯರಲ್ಲಿ ಒಬ್ಬರಾಗಿದ್ದರು. ಅವರ ತಂದೆ ತೀರಿಕೊಂಡಿದ್ದರು. ಇವರು ಸಂಕ್ಷಿಪ್ತ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯಾಗಿ ಬಂದು ಸೇರಿಕೊಂಡರು. ಸೇರಿಕೊಂಡಾಗ ೭ನೇ ತರಗತಿಯನ್ನು ಮಾತ್ರ ಮುಗಿಸಿದ್ದರು. ಆಮೇಲೆ ಟ್ರಸ್ಟಿನ ಸಂಕ್ಷಿಪ್ತ ಶಿಕ್ಷಣ ಶಾಲೆಯಲ್ಲಿ ೨ವರ್ಷ ಖಾಸಗಿಯಾಗಿ ವ್ಯಾಸಂಗಮಾಡಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆಮೇಲೆ ತಮ್ಮ ಊರಿಗೆ ಹೋಗಿ ಹಿಂದಿಯಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ರಾಷ್ಟ್ರ ಭಾಷಾ ವಿಶಾರದ ಪರೀಕ್ಷೆ ಮುಗಿಸಿ ನಂತರ ಹಿಂದಿ ಅಧ್ಯಾಪಕಿಯಾಗಿ ಕೆಲಸ ಮಾಡಿದರು. ದೂರ ಶಿಕ್ಷಣದ ಮೂಲಕ ಎಂ.ಎ ಪದವಿಯನ್ನೂ ಪಡೆದರು. ಹೀಗೆ ಏಳನೇ ತರಗತಿಯಿಂದ ಎಂ.ಎ ವರೆಗೆ ವಿದ್ಯಾಭ್ಯಾಸ ಮಾಡಲು ಅವರಿಗೆ ಟ್ರಸ್ಟಿನ ಸಂಕ್ಷಿಪ್ತ ಶಿಕ್ಷಣ ಶಾಲೆ ನೆರವಾಯಿತೆಂಬುದು ಹೆಮ್ಮೆಯ ಸಂಗತಿಯಾಗಿದೆ. ಈಗಲೂ ಸಹ ಅವರು ಟ್ರಸ್ಟಿನೊಂದಿಗೆ ಸಂಪರ್ಕವನ್ನಿರಿಸಿಕೊಂಡಿದ್ದಾರೆ.

ಪದ್ಮ ಅವರ ಜೀವನ ಯಾವ ರೀತಿ ಉತ್ಕರ್ಷಹೊಂದಿತೊ ಅದೇ ರೀತಿ ಇನ್ನುಳಿದ ಅನೇಕ ಮಹಿಳೆಯರ ಜೀವನದಲ್ಲಿ ಉತ್ಕರ್ಷ ಸಂಭವಿಸಿರುವುದು ಟ್ರಸ್ಟಿನ ಅಭಿಮಾನದ ಅನೇಕ ಸಂಗತಿಗಳಲ್ಲಿ ಒಂದಾಗಿದೆ.

ವಯಸ್ಕ ಮಹಿಳೆಯರ ಜೀವನದಲ್ಲಿ ಉತ್ಕರ್ಷದ ಕ್ರಾಂತಿಯನ್ನುಂಟುಮಾಡಿದ ಟ್ರಸ್ಟ್ ಅನೇಕ ಅಂಗವಿಕಲರ ಜೀವನದಲ್ಲಿಯೂ ಮಾಡಿದೆ. ಅನೇಕ ಅಂಗವಿಕಲ ವಿದ್ಯಾರ್ಥಿಗಳ ಯಶಸ್ಸಿನ ಗಾಥೆಗಳಿವೆ. ಅವುಗಳಲ್ಲಿ ಜ್ಞಾಪಿಸಿಕೊಳ್ಳಬಹುದಾದದ್ದು

ಜೆ.ರಾಚಪ್ಪನವರ ಯಶಸ್ಸಿನ ಕಥೆ. ೧೯೬೩ರಲ್ಲಿ ಕರುಣಾಗೃಹ ಪ್ರಾರಂಭವಾದ ಆಸು ಪಾಸಿನ ಸುಮಾರಿನಲ್ಲಿ ಟ್ರಸ್ಟಿನ ಕಾರ್ಯದರ್ಶಿಯವರಿಗೆ ಮೈಸೂರಿನ ರಸ್ತೆಯೊಂದರಲ್ಲಿ ಅಕಸ್ಮಾತ್ತಾಗಿ ರಾಚಪ್ಪನವರ ಭೇಟಿಯಾಯಿತು. ಕರುಣಾಗೃಹವು ಅಂಗವಿಕಲ ಮಕ್ಕಳಿಗಾಗಿ ಆಶ್ರಯ ಮತ್ತು ಪ್ರೋತ್ಸಾಹ ಕೊಡುವಂಥ ಸಂಸ್ಥೆಯಾಗಿದ್ದುದರಿಂದ ಟ್ರಸ್ಟಿನ ಕಾರ್ಯದರ್ಶಿಯವರು ತಾವು ಹೋದೆಡೆಯೆಲ್ಲೆಲ್ಲ ಅಂಗವಿಕಲ ಮಕ್ಕಳ ಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಆದ್ದರಿಂದ ಮೈಸೂರಿನಲ್ಲಾದ ರಾಚಪ್ಪನವರ ಭೇಟಿ ಕರುಣಾಗೃಹದ ಕಾರ್ಯಸಾಧನೆಯಲ್ಲಿ ಮತ್ತು ರಾಚಪ್ಪನವರ ಜೀವನದಲ್ಲಿ ಪರಿವರ್ತನೆಯ ಒಂದು ಗಳಿಗೆಯಾಯಿತು. ರಾಚಪ್ಪನವರು ವಿಶಿಷ್ಟವಾದ ಶಾರೀರಿಕ ತೊಂದರೆಯನ್ನು ಹೊಂದಿದ್ದರು. ತಮ್ಮ ತಿರುಗಿಕೊಂಡಿದ್ದ ಎರಡು ಕಾಲುಗಳ ಆಧಾರದೊಂದಿಗೆ ತಮ್ಮ ಎರಡು ಕೈಗಳನ್ನು ನೆಲದ ಮೇಲೆ ಆಧಾರವಾಗಿಟ್ಟುಕೊಂಡು ನಡೆಯುತ್ತಿದ್ದರು. ಈ ರೀತಿಯ ವಿಶೇಷ ಪ್ರಕಾರದ ಅಂಗವಿಕಲತೆಯನ್ನು ಹೊಂದಿದ್ದ ರಾಚಪ್ಪನವರು ಮಾನಸಿಕವಾಗಿ ಮತ್ತು ಆತ್ಮೀಕವಾಗಿ ಬಹಳ ಸ್ಥೈರ್ಯವನ್ನು ಹೊಂದಿದವರಂಥವರಾಗಿದ್ದರು. ಅವರಿಗೆ ಮೇಲುಕೋಟೆಯಲ್ಲಿನ ಕರುಣಾಗೃಹದ ವಿಷಯವನ್ನು ತಿಳಿಸಿದಾಗ ಅವರು ಕೂಡಲೆ ಬರಲು ಒಪ್ಪಿದರು. ಅವರ ಈ ಒಪ್ಪಿಗೆ ನನ್ನಲ್ಲಿ ಆಶ್ಚರ್ಯವನ್ನುಂಟುಮಾಡಿತು. ಏಕೆಂದರೆ ಈ ಮೊದಲು ಬೇರೆ ಪರಿಸ್ಥಿತಿಗಳಲ್ಲಿದ್ದಂಥ ಅಂಗವಿಕಲ ಮಕ್ಕಳನ್ನು ಕರುಣಾಗೃಹಕ್ಕೆ ಕರೆದಾಗ ಅವರು ನಿರಾಸಕ್ತಿಯನ್ನು ತೋರಿಸಿದ್ದರು. ಆದ್ದರಿಂದ ರಾಚಪ್ಪನವರ ತಕ್ಷಣದ ಒಪ್ಪಿಗೆ ನನ್ನಲ್ಲಿ ಆಶ್ಚರ್ಯವನ್ನೂ, ಸಂತಸವನ್ನೂ ಉಂಟುಮಾಡಿತು. ರಾಚಪ್ಪನವರ ತಂದೆ–ತಾಯಿಗಳು ಬಡವರಾಗಿದ್ದರು. ಭೇಟಿಯಾದ ದಿನವೆ ಸಂಜೆಯ ಬಸ್ಸಿನಲ್ಲಿ ನನ್ನೊಂದಿಗೆ ಮೇಲುಕೋಟೆಗೆ ರಾಚಪ್ಪ ಬಂದುಬಿಟ್ಟರು ಮತ್ತು ಕರುಣಾಗೃಹದ ವಿದ್ಯಾರ್ಥಿಯಾಗಿ ಸೇರಿಕೊಂಡರು. ಆನಂತರ ಅವರು ತಮ್ಮ ಜೀವನವನ್ನು ರೂಪಿಸಿಕೊಳ್ಳುವ ವಿಚಾರದಲ್ಲಿ ಹಿಂದೆ ನೋಡಿದ್ದೇ ಇಲ್ಲ. ತಮ್ಮ ಸ್ವ–ಸಾಮರ್ಥ್ಯದಿಂದ ಮತ್ತು ಆತ್ಮವಿಶ್ವಾಸದ ಬಲದಿಂದ ಮತ್ತು ಸ್ವಾಭಿಮಾನದಿಂದ ಪ್ರಗತಿಯತ್ತ ಮುಖ ಮಾಡಿ ತಮ್ಮ ವಿಕಲ ಶರೀರವನ್ನು ನಡೆಸಿಕೊಂಡು ಹೋದರು. ರಾಚಪ್ಪನವರ ಜೀವನವೆ ಒಂದು ರೋಮಾಂಚಕಾರಿ ಕಥೆಯಾಗಿದೆ. ಅವರ ಜೀವನದ ವಿಶೇಷತೆಯೇನೆಂದರೆ ತಾವು ಸ್ವತಃ ಶಾರೀರಿಕ ತೊಂದರೆಯನ್ನು ಹೊಂದಿದ್ದರೂ ಸಹ ಅದನ್ನು ಉದಾಸೀನ ಮಾಡಿ ಬೇರೆ ಅಂಗವಿಕಲರಿಗೆ ನೆರವಾಗುತ್ತಾ ಬಂದರು. ಕರುಣಾಗೃಹದಲ್ಲಿದ್ದುಕೊಂಡು ಎಸ್.ಎಸ್.ಎಲ್.ಸಿ ಪರೀಕ್ಷೆಯವರೆಗೆ ಓದಿ ನಂತರ ಮೈಸೂರಿನಲ್ಲಿ ಟ್ರಸ್ಟಿನ ನೆರವಿನೊಂದಿಗೆ ವಿದ್ಯಾಭ್ಯಾಸ ಮಾಡಿ ಪದವೀಧರರಾದರು. ನಂತರ ವಿಕ್ರಾಂತ್ ಟೈರ್ ಕಂಪನಿಯಲ್ಲಿ

ಉದ್ಯೋಗವನ್ನು ಸಹ ಪಡೆದರು. ನಂತರ ಚಂದ್ರಕಾಂತ ಎಂಬ ಓರ್ವ ಅಂಗವಿಕಲ ಯುವತಿಯೊಂದಿಗೆ ಕರುಣಾಗೃಹದಲ್ಲಿಯೆ ವಿವಾಹವಾದರು. ರಾಚಪ್ಪನವರು ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರ್ರದಲ್ಲಿದ್ದುಕೊಂಡು ಬಹಳಷ್ಟು ಶ್ರಮ ಮಾಡಿದರು. ಅಲ್ಲಿರುವ ಇಂದಿನ ಅನೇಕ ಗಿಡಮರಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ. ರಾಚಪ್ಪನವರ ಕಾರ್ಯದಕ್ಷತೆ, ಪ್ರಾಮಾಣಿಕತೆ ಮತ್ತು ನಾಯಕತ್ವದ ಗುಣಗಳನ್ನು ಗುರ್ತಿಸಿದ ಟ್ರಸ್ಟ್ ಅವರನ್ನು ಓರ್ವ ಧರ್ಮದರ್ಶಿಯನ್ನಾಗಿ ಆಯ್ಕೆ ಮಾಡಿಕೊಂಡಿತಲ್ಲದೆ ಕ್ರಮೇಣ ಅವರಿಗೆ ಟ್ರಸ್ಟಿನ ಖಜಾಂಚಿಯ ಜವಾಬ್ದಾರಿಯನ್ನೂ ಕೊಟ್ಟಿತು. ಮೈಸೂರಿನಲ್ಲಿ ನೆಲಸಿದ ಮೇಲೆ ರಾಚಪ್ಪನವರು ಮೈಸೂರು ನಗರ ಅಂಗವಿಕಲರ ಅಭ್ಯುದಯ ಸಂಘವನ್ನು ಸ್ಥಾಪಿಸುವಲ್ಲಿ ದಿ॥ ಬಿ.ಆರ್. ಪ್ರಾಣೇಶ್‌ರಾವ್ ಮತ್ತು ಪದ್ಮಕುಮಾರ್ ಅವರಿಗೆ ನೆರವಾದರು. ಸಂಘದ ಅನೇಕ ಕಾರ್ಯಕ್ರಮಗಳನ್ನು ನಡೆಸಿದರು. ಮೈಸೂರಿನಲ್ಲಿ ಅಂಗವಿಕಲರಿಗಾಗಿಯೆ ಒಂದು ಬಡಾವಣೆ ನಿರ್ಮಾಣವಾಗುವಂತೆ ಹೋರಾಡಿದರು. ೧೯೯೦ರಲ್ಲಿ ಮೇಲುಕೋಟೆಯಲ್ಲಿ ನಡೆದ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನದ ವ್ಯವಸ್ಥೆಯಲ್ಲಿ ಬಹು ಪ್ರಮುಖ ಪಾತ್ರ ವಹಿಸಿ ಎಲ್ಲ ಪ್ರತಿನಿಧಿಗಳ ಮೆಚ್ಚುಗೆಗೆ ಪಾತ್ರರಾದರು. ರಾಚಪ್ಪನವರು ತುಂಬಾ ಧೈರ್ಯಮಾಡಿ ತಮ್ಮ ಶಾರೀರಿಕ ತೊಂದರೆಯನ್ನು ಶಸ್ತ್ರಚಿಕಿತ್ಸೆಯ ಮೂಲಕ ನಿವಾರಿಸಿಕೊಳ್ಳಲು ತೀರ್ಮಾನಿಸಿದರು. ಆಗ ಟ್ರಸ್ಟ್ ಮತ್ತು ಅನೇಕ ದಾನಿಗಳ ನೆರವಿನಿಂದ ಅವರ ಕಾಲಿನ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಲಾಯಿತು. ಈಗ ಅವರು ಊರುಗೋಲುಗಳ ಸಹಾಯದಿಂದ ನಡೆಯಬಲ್ಲವರಾಗಿದ್ದಾರೆ. ಇಂಥ ರಾಚಪ್ಪನವರ ಬಗ್ಗೆ ಟ್ರಸ್ಟ್ ಅಭಿಮಾನ ಪಡುವುದರಲ್ಲಿ ಯಾವ ಅಸಹಜತೆ ಇಲ್ಲ. ಇದೇ ರೀತಿ ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿರುವಂಥ ಕರುಣಾಗೃಹದ ಅನೇಕ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಇಂದಿಗೂ ನಮ್ಮ ಸುತ್ತ ಇರುವುದು ಸಂತೋಷದ ಸಂಗತಿ.

(ಮುಂದುವರೆಯುವುದು....)

ಪುಸ್ತಕ ಪರಿಚಯ

ಪುಸ್ತಕದ ಹೆಸರು – 'ಪಾಪು ಗಾಂಧಿ, ಗಾಂಧಿ ಬಾಪು ಆದ ಕತೆ'
ಲೇಖಕರು – ಬೋಳುವಾರು ಮಹಮ್ಮದ್ ಕುಂಞ
ಪ್ರಕಾಶಕರು – ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು:೫೬೦೦೦೩
ಮೊದಲ ಮುದ್ರಣ – ೨೦೦೬
ಬೆಲೆ – ರೂ.೬೦.೦೦

'ಪಾಪು ಗಾಂಧಿ, ಗಾಂಧಿ ಬಾಪು ಆದ ಕತೆ'ಯ ಪಾಪು, ಗಾಂಧಿ, ಮತ್ತು ಬಾಪು ಎಂಬ ಮೂರು ವಿಭಾಗಗಳಲ್ಲಿ ಒಟ್ಟು ನಲವತ್ತೊಂದು ಅಧ್ಯಾಯಗಳಿವೆ.

ಗಾಂಧೀಜಿಯ ಆತ್ಮಕತೆಯಲ್ಲಿ ಮಿಂಚಿ ಮಾಯವಾಗುವ ಸಣ್ಣ ಘಟನೆಗಳು ಬೋಳುವಾರು ಅವರ ಕಥನ ಕೌಶಲದಲ್ಲಿ ರೂಪಾಂತರಗೊಂಡು ಹೊಸ ಮೆರಗು ಪಡೆದಿವೆ.

'ಗಾಂಧಿ' ವಿಭಾಗದಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ವಾಸವಾಗಿದ್ದಾಗಿನ ೨೫ವರ್ಷಗಳ ಕೆಲವು ಪುಟ್ಟ ಘಟನೆಗಳಿವೆ. ಅವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದ ಘಟನೆಗಳು 'ತಲೆಗೊಂದು ಮುಂಡಾಸು', 'ಯೇಸುಕ್ರಿಸ್ತ ಇಳಿಸಿದ ಬಾವುಟ', 'ಮುನಿದರೆ ನಾರಿ' – ಅಧ್ಯಾಯಗಳಲ್ಲಿವೆ.

ತನ್ನ ೪೫ನೇ ವಯಸ್ಸಿನಲ್ಲಿ (೧೯೧೪) ಮರಳಿ ಮಣ್ಣಿಗೆ ಬಂದ ಗಾಂಧೀಜಿ ಮುಂದಿನ ೩೬ವರ್ಷಗಳನ್ನು ಸತ್ಯಾಗ್ರಹಕ್ಕೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಮೀಸಲಿಟ್ಟರು. ಈ ವಿಭಾಗಕ್ಕೆ ಬಂದಾಗ ಪುಟಮಿತಿಯು ಲೇಖಕ ಬೋಳುವಾರು ಅವರ ಕೈ ಕಟ್ಟಿದಂತೆ ಅನಿಸುತ್ತದೆ. ಗಾಂಧೀಜಿ ದಕ್ಷಿಣ ಕನ್ನಡದ ಪುತ್ತೂರಿಗೆ ಭೇಟಿಕೊಟ್ಟ ಸಂದರ್ಭದ ಒಂದು ಐತಿಹ್ಯವನ್ನು 'ಸೂರಿ ಕುಮೇರಿನ ಬಾವಿ' ಎಂಬ ಅಧ್ಯಾಯದಲ್ಲಿ ಬೋಳುವಾರು ಚೆನ್ನಾಗಿ ನಿರೂಪಿಸಿದ್ದಾರೆ. 'ವಿಭಜನೆಯ ಶಾಪ' ಎಂಬ ಅಧ್ಯಾಯ, ಗಾಂಧೀಜಿಯ ಕೊನೆಯ ದಿನಗಳನ್ನು ಕುರಿತ 'ಮಹಾತ್ಮನ ಮನಸು' – ಹೃದಯಸ್ಪರ್ಶಿಯಾಗಿವೆ.

'ಯುಗಪುರುಷನ ಯುಗಳ' ಎಂಬ ಕೊನೆಯ ಅಂತಿಮ ಅಧ್ಯಾಯದಲ್ಲಿರುವ ಗಾಂಧೀಜಿಯ ಸ್ವಂತದ ಪ್ರಶ್ನೆಗಳು ಗಾಂಧೀಜಿಯ ವ್ಯಕ್ತಿತ್ವವನ್ನು ಕುರಿತ ವಿಸ್ತೃತ ಜಿಜ್ಞಾಸೆಗೆ ಪ್ರೇರಣೆ ನೀಡುವಂತಿವೆ. "ಮುಂದೊಂದು ದಿನ ಚರಿತ್ರೆ ಓದುವವರು, ದೇಶ ವಿಭಜನೆಯಲ್ಲಿ ನೀನೂ ಪಾಲುದಾರನೆಂದು ತಿಳಿದಾರೆಂಬ ಭಯದಿಂದಲ್ಲವೆ ನೀನು ಆಗಸ್ಟ್ ೧೫ರ ಸಮಾರಂಭವನ್ನು ತಪ್ಪಿಸಿಕೊಂಡು ಕಲಕತ್ತಾಗೆ ಹೋಗಿ ಕುಳಿತದ್ದು?" – ಈ ಪ್ರಶ್ನೆ ಔಚಿತ್ಯ ಪೂರ್ಣವಾಗಿದೆ.

ಕತೆಗಾರ ಬೋಳುವಾರು, 'ಪ್ರಹ್ಲಾದನಂತೆ ಸತ್ಯಾಗ್ರಹ ಹೂಡಿ ನನ್ನೊಳಗಿನ ಹಿರಣ್ಯಕಶಿಪುವನ್ನು ಕೊಂದ ಹೆಣ್ಣು ಮಕ್ಕಳಿಗೆ' ಈ ಪುಸ್ತಕವನ್ನು ಅರ್ಪಿಸಿದ್ದಾರೆ. ಮಹಾತ್ಮಾ ಗಾಂಧಿಯವರ ಜೀವನ ಚರಿತ್ರೆಯಲ್ಲಿ ಬೋಳುವಾರು ಅವರು ಕೈ ಬಿಟ್ಟಿರುವ, ಅಲಕ್ಷಿಸಿರುವ ಘಟನೆಗಳನ್ನು ಕುರಿತು ನಾವು ಅವರೊಂದಿಗೆ ಜಗಳವಾಡಬಹುದು. ಆದರೆ ಈ ಪುಸ್ತಕ ಓದಿ, ಗಾಂಧೀಜಿ ಏಕೆ ಇಂದಿಗೂ ನಮ್ಮ ಸಮಕಾಲೀನರು ಎಂದು ಧ್ಯಾನಿಸುತ್ತ, ಅಂತರಂಗದಲ್ಲಿ ಗಾಂಧೀಜಿಯವರೊಂದಿಗೆ ಜಗಳವಾಡುವುದು ಮುಖ್ಯ.

– ಪ್ರೊ. ಮುರಳೀಧರ ಉಪಾಧ್ಯ

ವಾಚಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com